# ಭಾರತೀಯ ನಿವಾಸಿಗಳಿಗೆ ಆಧಾರ್ ಕೈಪಿಡಿ

## ಪರಿವಿಡಿ

1 ಪರಿಚಯ .......................................................... 3

1.1 ಆಧಾರ್ ಅವಲೋಕನ ..........................................................4

1.2 ಆಧಾರ್ ಯಾರು ಪಡೆಯಬಹುದು? ..........................................................4

1.2.1 ಭಾರತದ ನಿವಾಸಿಗಳಿಗೆ ಆಧಾರ್ ..........................................................4

1.2.2 ಅನಿವಾಸೀ ಭಾರತೀಯರಿಗೆ ಆಧಾರ್ ..........................................................4

1.3 ಆಧಾರ್ ನ ವೈಶಿಷ್ಟ್ಯಗಳು ..........................................................4

1.3.1 ಆಧಾರ್ ಒಂದು ಗುರುತು ..........................................................4

1.3.2 ಆಧಾರ್ ಒಂದು ಗುರುತು ಅದಕ್ಕಿಂತ ಬೇರೇನೂ ಅಲ್ಲ ..........................................................5

1.4 ಆಧಾರ್ ಬಳಕೆ ..........................................................5

2 ಆಧಾರ್ ಗೆ ನೋಂದಣಿ ಮಾಡುವುದು ಹೇಗೆ ? ..........................................................5

2.1 ನೋಂದಣಿ ಪ್ರಕ್ರಿಯೆ ..........................................................5

2.2 ಆಧಾರ್ ನೋಂದಣಿಗೆ ನೆನಪಿಡಬೇಕಾದ ಅಂಶಗಳು ..........................................................8

2.3 ಆಧಾರ್ ನೋಂದಣಿ ಕೇಂದ್ರ ..........................................................8

2.3.1 ನಿಮ್ಮ ಹತ್ತಿರದ ಆಧಾರ್ ನೋಂದಣಿ ಕೇಂದ್ರವನ್ನು ಗುರುತಿಸಿ..........................................................8

2.3.2 ನೋಂದಣಿ ಕೇಂದ್ರಗಳ ಬಗೆಗಳು ..........................................................9

2.4 ಸೇವೆಯ ಆನ್ ಲೈನ್ ನಿಗದಿ ..........................................................9

2.4.1 ಆಧಾರ್ ಸೇವೆಗಳ ನಿಗದಿ ..........................................................9

2.4.2 ಆನ್ ಲೈನ್ ನಿಗದಿಯನ್ನ ಕಾಯ್ದಿರಿಸಿಕೊಳ್ಳುವುದು ಹೇಗೆ ? ..........................................................10

2.5 ಆಧಾರ್ ದಾಖಲಾತಿ ಸ್ಥಿತಿ ಪರಿಶೀಲನೆ

2.5.1 ಆಧಾರ್ ರೂಪುಗೊಳ್ಳುವ ಘಟ್ಟಗಳು ....................................................................................10

2.5.2 ನೋಂದಣಿ ಐ ಡಿ ಕಳೆದಲ್ಲಿ ಏನು ಮಾಡಬೇಕು? ..........................................................................10

3 ಆಧಾರ್ ಅಪ್‌ಡೇಟ್...................................................................................................................10

3.1 ಅಪ್‌ಡೇಟ್ ಗೆ ಅವಶ್ಯವಿರುವ ದಾಖಲೆಗಳು ..............................................................................11

3.2 ಆನ್ ಲೈನ್ ನಲ್ಲಿ ಡೆಮೊಗ್ರಾಫಿಕ್ ನವೀಕರಣ ಸೌಲಭ್ಯ

3.2.1 ಆನ್ ಲೈನ್ ನಲ್ಲಿ ಡೆಮೊಗ್ರಾಫಿಕ್ ವಿವರಗಲಾನ್ನು ನವಿಕರಿಸಾಲು - ದಾಖಲೆಗಳೊಂದಿಗೆ

3.2.2 ಎಸ್ ಎಸ್ ಯುಪಿ ಮೂಲಕ ಸಲ್ಲಿಸಲಾಧಾ ವಿನಂತಿಯನ್ನು ತಿರಸ್ಕರಿಸುವುದನ್ನು ತಪ್ಪಿಸಲು - ಚೆಕ್ ಪಾಯಿಂಟ್ ಗಳು

3.3 ಮಕ್ಕಳಿಗೆ ಖಡ್ಡಾಯ ಬಯೋ ಮೆಟ್ರಿಕ್ ಅಪ್‌ಡೇಟ್.........................................................................12

3.4 ಆಧಾರ್ ನಲ್ಲಿ ಕೇರ್ ಆಫ್ ವಿಳಾಸದ ಅಪ್ ಡೇಟ್ ........................................................................... 12

3.5 ಅಪ್‌ಡೇಟ್ ನ ಬಹು ಬಾರಿ ಬಳಕೆಯಲ್ಲಿನ ಮಿತಿ ..........................................................................13

3.6 ಆಧಾರ್ ಅಪ್‌ಡೇಟ್ ಗೆ ಅಸಾಧಾರಣ ಪ್ರಕ್ರಿಯೆ ........................................................................... 13

3.7 ಅಮಾನತುಗೊಂಡ ಆಧಾರ್ ನ ಅಪ್‌ಡೇಟ್ ................................................................................. 13

3.8 ಅಪ್‌ಡೇಟ್ ಘಟ್ಟದ ಪರಿಶೀಲನೆ ..............................................................................................13

3.9 ಆಧಾರ್ ಅಪ್‌ಡೇಟ್ ಗೆ ನೆನಪಿಡಬೇಕಾದ ಅಂಶಗಳು .....................................................................14

3.10 ಆಧಾರ್ ನಿಂದ ನಿರ್ಗಮನ

4 ಆಧಾರ್ ನೋಂದಣಿ / ಅಪ್‌ಡೇಟ್ ಗೆ ಸಮಂಜಸವಾದ ದಾಖಲೆ ಪಟ್ಟಿ.......................................................14

5 ಆಧಾರ್ ನೋಂದಣಿ / ಅಪ್‌ಡೇಟ್ ಶುಲ್ಕ .....................................................................................15

5.1 ಆಧಾರ್ ನೋಂದಣಿ / ಅಪ್‌ಡೇಟ್ ಅರ್ಜಿಗೆ ಶುಲ್ಕ ಇಲ್ಲ ....................................................................15

5.2 ಸೇವಾ ಕೇಂದ್ರ ಹೆಚ್ಚಿನ ಶುಲ್ಕ ಪಡೆದರೆ ದೂರು ಸಲ್ಲಿಕೆ ಹೇಗೆ ? ....................................................16

6 ನಿಮ್ಮ ಆಧಾರ್ ನ ಸದಾ ನಿಮ್ಮ ಬಳಿ ಇರಿಸಿಕೊಳ್ಳಿ ........................................................................ 16

6.1 ಆಧಾರ್ ಪತ್ರ ........................................................................................................16

6.2 ಆಧಾರ್ ನ ಡೌನ್ ಲೋಡ್ ಮಾಡುವುದು ........................................................................................16

6.2.1 ಆಧಾರ್ ಡೌನ್ ಲೋಡ್ ಮಾಡಲು ಓ ಟಿ ಪಿ ಮತ್ತು ಪಾಸ್ ವರ್ಡ್ ....................................................16

6.2.2 ಇ ಆಧಾರ್ ನಲ್ಲಿನ ಡಿಜಿಟಲ್ ಸಹಿಯನ್ನು ಮಾನ್ಯಗೊಳಿಸುವುದು ....................................................17

6.2.3 ಡೌನ್ ಲೋಡ್ ಮಾಡಿದ ಆಧಾರ್ ಕಾನೂನು ಬದ್ಧ ..................................................................17

6.2.4 ಇ-ಆಧಾರ್ ನ ವೈಶಿಷ್ಟ್ಯಗಳು

6.3 ಇ-ಆಧಾರ್ ಮೊಬೈಲ್ ಆಪ್ ..........................................................................................17

6.4 ಆಧಾರ್ ಮರು ಮುದ್ರಣ ...........................................................................................17

6.5 ಆಧಾರ್ ಪಿ ವಿ ಸಿ (PVC) / ಸ್ಮಾರ್ಟ್ ಕಾರ್ಡ್

7 ಆಧಾರ್ ನ ಪರಿಶೀಲನೆ ...........................................................................................18

7.1 ಆನ್ ಲೈನ್ ನಲ್ಲಿ ಯಾವುದೇ ಆಧಾರ್ ಪರಿಶೀಲಿಸಿ ......................................................................18

7.2 ಆಧಾರ್ ನ ಕ್ಯೂ ಆರ್ ಸಂಕೇತವನ್ನು ಪಡೆಯುವುದು .......................................................................18

8 ಆಧಾರ್ ನಲ್ಲಿ ಆಧಾರ್ ಸೇವೆಗಳು ........................................................................................ 18

8.1 ಆಧಾರ್ ಆನ್ ಲೈನ್ ಸೇವೆಗಳು ( ದಾಖಲಿತ ಮೊಬೈಲ್ ನಂಬರ್ ನ ಅವಶ್ಯಕತೆ ಇಲ್ಲದೆ .........................18

8.2 ಆಧಾರ್ ಆನ್ ಲೈನ್ ಸೇವೆಗಳು ( ದಾಖಲಿತ ಮೊಬೈಲ್ ನಂಬರ್ ನ ಅಗತ್ಯವಿದೆ ) ..................................19

8.3 ಆಗಾಗ ಕೇಳುವ ಪ್ರಶ್ನೆಗಳು ..............................................................................................19

9 ನಿಮ್ಮ ಆಧಾರ್ ದತ್ತಾಂಶ ಗೌಪ್ಯತೆ - ಸಂರಕ್ಷಣೆ ..........................................................................19

9.1 ಯು ಐ ಡಿ ಎ ಐ ರಕ್ಷಿತ ಗೌಪ್ಯತೆ ಹಾಗೂ ಮಾಹಿತಿ ......................................................................20

9.2 ಸಿ ಐ ಡಿ ಆರ್ ನಲ್ಲಿ ದತ್ತಾಂಶದ ರಕ್ಷಣೆ ..............................................................................20

9.3 ನೀವೇ ನಿಮ್ಮ ಆಧಾರ್ ಮಾಹಿತಿಯನ್ನು ಹೇಗೆ ಮತ್ತಷ್ಟು ಕಾಪಾಡಿಕೊಳ್ಳಬಹುದು ....................................20

10 ಕುಂದು ಕೊರತೆ ನಿರ್ವಹಣೆ ..........................................................................................................21

10.1 ಆಧಾರ್ ಸಂಪರ್ಕ ಕೇಂದ್ರ – ಸಹಾಯವಾಣಿ 1947 ..................................................................................22

10.2 ಇ ಮೇಲ್ ಮೂಲಕ ಸಹಾಯ ...................................................................................................22

10.3 ಆಧಾರ್ ವೆಬ್ ಸೈಟ್ ......... ..................................................................................................23

10.4 ಆಧಾರ್ 'ಚಾಟ್ ಬಾತ್ ' ............................................................................................................23

10.5 ಸಾಮಾಜಿಕ ಮಾಧ್ಯಮ .................................................................................................................23

10.5.1 ಅಧಿಕೃತ ಮಾಧ್ಯಮದ ಪ್ರೊಫೈಲ್ ಗಳು ................................................................................23

10.5.2 ನಕಲಿ ಪ್ರೋಫೈಲ್ಸ / ಬಳಕೆದಾರರ ಖಾತೆಗಳ ಬಗ್ಗೆ ಎಚ್ಚರಿಕೆ ..........................................................24

10.6 ಆಧಾರ್ ಪ್ರಾದೇಶಿಕ ಕಛೇರಿಗಳು .......................................................................................25

11 ಆಧಾರ್ ಸಂಹಿತೆ ...................................................................................................................25

12 ಆಧಾರ್ (ನೋಂದಣಿ ಹಾಗೂ ಅಪ್ ಡೇಟ್ ) ನಿಯಮಗಳು ,2016 ಸಮಂಜಸ ಸೆಕ್ಷನ್ ................................26

12.1 ಅಧ್ಯಾಯ 2 – ನಿವಾಸಿ ನೋಂದಣಿ ಪ್ರಕ್ರಿಯೆ .......................................................................26

12.2 ಅಧ್ಯಾಯ 4 – ನಿವಾಸಿ ಮಾಹಿತಿ ಅಪ್ ಡೇಟ್ ..........................................................................27

12.3 ಅಧ್ಯಾಯ 6 – ಆಧಾರ್ ಸಂಖ್ಯೆ ಹಾಗೂ ಗುರುತಿನ ಮಾಹಿತಿಯನ್ನು ತೆಗೆದು ಹಾಕು / ನಿಷ್ಕ್ರಿಯಿಸುವಿಕೆ......28

13 ಅನುಬಂಧ ..........................................................................................................................30

13.1 ಪರಿಚ್ಛೇದ 1 - ಸಮಂಜಸ ದಾಖಲೆಗಳ ಪಟ್ಟಿ ..............................................................................30

13.2 ಪರಿಚ್ಛೇದ 2 – ಆಧಾರ್ ನೋಂದಣಿ - ಅಪ್ ಡೇಟ್ ಪ್ರಮಾಣ ಪತ್ರದ ಸ್ವರೂಪ ................................30

13.3 ಪರಿಚ್ಛೇದ 3 – ಭರ್ತಿ ಮಾಡುವುದು ಹೇಗೆ? (ಆಧಾರ್ ನೋಂದಣಿ / ನವೀಕರಣಕ್ಕಾಗಿ ಪ್ರಮಾಣಪತ್ರ)

13.4 ಪರಿಚ್ಛೇದ 4 – ನೋಂದಣಿ ಅರ್ಜಿ ..........................................................................................30

13.5 ಆಧಾರ್ ಶಿಕ್ಷಣದ ದೃಶ್ಯಾವಳಿ ....................................................................................................30

13.6 ಆಧಾರ್ ಆನ್ ಲೈನ್ ಸೇವೆಗಳು ..........................................................................................30

13.7 ಆಧಾರ್ ನ ಸಾಮಾಜಿಕ ಮಾಧ್ಯಮಗಳು ..........................................................................30

## 1. ಪರಿಚಯ

ಪ್ರಿಯ ನಿವಾಸಿ ,

ಆಧಾರ್ ಕುಟುಂಬಕ್ಕೆ ಸ್ವಾಗತ .

ಆಧಾರ್ ಕೈಪಿಡಿಯನ್ನು ನಿಮ್ಮ ಆಧಾರ್ ಮಾರ್ಗದರ್ಶಿಯಾಗಿ ವಿನ್ಯಾಸಗೊಳಿಸಲಾಗಿದೆ . ನೀವು ಈ ದಾಖಲೆಯನ್ನು ಓದುವುದರ ಮೂಲಕ ಆಧಾರ್ ನ ಅರ್ಥ ಹಾಗೂ ಉದ್ದೇಶವನ್ನು ಸಂಪೂರ್ಣವಾಗಿ ಗ್ರಹಿಸಿ ಕೊಳ್ಳಬೇಕೆಂಬುದು ನಮ್ಮ ಒತ್ತಾಸೆ.

ಈ ಕೈಪಿಡಿ ನಿಮ್ಮ ಆಧಾರ್ ನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ . ನಿಮ್ಮ ಆಧಾರ್ ನ್ನು ಹೇಗೆ ಪಡೆದುಕೊಳ್ಳುವುದು - ಹೇಗೆ ನಿಮ್ಮ ಆಧಾರ್ ನ ಯಾವುದೇ ಮಾಹಿತಿಯನ್ನು ಅಪ್ಡೇಟ್ ಮಾಡುವುದು - ಮತ್ತು ನಿಮ್ಮ ಆಧಾರ್ ನ ಉಪಯೋಗ ಹೀಗೆ, ಎಲ್ಲ ಬಗೆಯ ನಿಮ್ಮ ಪ್ರಶ್ನೆಗಳಿಗೆ ಉತ್ತರ ಈ ಕೈಪಿಡಿಯಲ್ಲಿದೆ . ನಿಮ್ಮ ಆಧಾರ್ ಗೆ ಸಂಬಂಧಿಸಿದ ಪ್ರಕ್ರಿಯೆ ಹಾಗೂ ಸೇವೆಗಳ ವಿಸ್ತೃತ ಮಾಹಿತಿ ಕೂಡ ಇದರಲ್ಲಿದೆ . ಪ್ರತಿ ವಿಭಾಗದಲ್ಲಿ ಕ್ಯುಆರ್ ಕೋಡ್ ಗಳನ್ನೂ ನೀವೂ ನೋಡಬಹುದು .ನಿಮ್ಮ ಸ್ಮಾರ್ಟ್ ಫೋನ್ ನಲ್ಲಿ ಲಭ್ಯವಿರುವ ಯಾವುದೇ ಕ್ಯೂಆರ್ ಸ್ಕ್ಯಾನರ್ ಕೋಡ್ ಆಪ್ ನಿಂದ ಸಂಬಂಧಿತ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಸಂಬಂಧಿತ ವೆಬ್ ತಾಣಕ್ಕೆ ಹೋಗಬಹುದು ಅಥವಾ ಸೂಚಿಸಿರುವ ಸೇವೆಯ ವೀಡಿಯೋ ಟ್ಯುಟೋರಿಯಲ್ ನೋಡಬಹುದು .

ನಿಮ್ಮ ಆಧಾರ್ ಪ್ರಯಾಣವನ್ನು ಆಧಾರ್ ಲೋಕದ, ಅಂದರೆ ಸಂಬಂಧಿತ ಪ್ರಕ್ರಿಯೆಗಳು, ನಿಮಗೆ ಲಭ್ಯವಿರುವ ಸೇವೆಗಳು ಹಾಗೂ ನಿಮ್ಮ ವಿಶಿಷ್ಟವಾದ 12 ಅಂಕೆಗಳ ಆಧಾರ್ ಸಂಖ್ಯೆಯ ಪ್ರಭಾವದ ಇಣುಕು ನೋಟದೊಂದಿಗೆ ಆರಂಭಿಸೋಣ .

### 1.1 ಆಧಾರ್ ಅಂದರೆ ಏನು ?

ಪ್ರಾಧಿಕಾರ (ಸೆಕ್ಷನ್ 2 ರ ವಿವರಣೆಯ ಅನ್ವಯ ) ಸೂಚಿಸಿರುವ ಪರಿಶೀಲನಾ ಪ್ರಕ್ರಿಯೆಗಳು ತೃಪ್ತಿಕರವಾದ ನಂತರ ಯು ಐ ಡಿ ಐ ಎ , ಭಾರತ ನಿವಾಸಿಗಳಿಗೆ ನೀಡುವ ವಿಶಿಷ್ಟ ಗುರುತಿನ 12 ಅಂಕೆಗಳ ಸಂಖ್ಯೆ ಈ ಆಧಾರ್ .

### 1.2 ಆಧಾರ್ ನ ಯಾರು ಪಡೆಯಬಹುದು ?

ಯಾವುದೇ ವ್ಯಕ್ತಿ , ಯಾವುದೇ ವಯೋಮಾನ / ಲಿಂಗವಿರಲಿ ಭಾರತದ ನಿವಾಸಿ ಅಥವಾ ಅನಿವಾಸೀ ಭಾರತೀಯ ಸಹ ಆಧಾರ್ ಸಂಖ್ಯೆ ಹೊಂದಲು ನೋಂದಣಿ ಮಾಡಿಕೊಳ್ಳಬಹುದು . ಪ್ರತಿ ವ್ಯಕ್ತಿಗೆ ಒಂದೇ ಒಂದು ಆಧಾರ್ ಸಂಖ್ಯೆಯನ್ನು ನೀಡಲಾಗುತ್ತಿದ್ದು ಸಂಖ್ಯೆಯ ಅನನ್ಯತೆಯನ್ನು ನಕಲು ಮಾಡಲಾಗದ ಡೆಮೊಗ್ರಾಫಿಕ್ ಹಾಗೂ ಬಯೋಮೆಟ್ರಿಕ್ ಡಿ ಡುಪ್ಲಿಕೇಷನ್ ಪ್ರಕ್ರಿಯೆಯಿಂದ ಸಾಧಿಸಲಾಗಿದೆ .

### 1.2.1 ಭಾರತದ ನಿವಾಸಿಗಳಿಗೆ ಆಧಾರ್

ನೀವು ಭಾರತದ ನಿವಾಸಿಯಾಗಿದ್ದರೆ ಆಧಾರ್ ನೋಂದಣಿಗೆ ಅರ್ಹರು. ಭಾರತ ನಿವಾಸಿ ಅಂದರೆ , ಆಧಾರ್ ನೋಂದಣಿಗೆ ಅರ್ಜಿ ಸಲ್ಲಿಸುವ ದಿನಾಂಕದಿಂದ ಹಿಂದಿನ 12 ತಿಂಗಳ ಅವಧಿಯಲ್ಲಿ ಒಂದೇ ಸಲ ಅಥವಾ ಆಗ್ಗಾಗ್ಗೆ ಒಟ್ಟಾಗಿ 182 ದಿನ ಭಾರತದಲ್ಲಿ ವಾಸಿಸಿದ್ದವರು ಎಂದು ವಿಶ್ಲೇಷಿಸಲಾಗಿದೆ.

### 1.2.2 ಅನಿವಾಸೀ ಭಾರತೀಯರಿಗೆ ಆಧಾರ್

ನೀವು ಭಾರತದ ಅನಿವಾಸಿಯಾಗಿದ್ದರೂ ನಿಮ್ಮ ಬಳಿ ಪಾಸ್ ಪೋರ್ಟ್ ಇದ್ದಾರೆ ನೀವು ಆಧಾರ್ ಗೆ ನೋಂದಣಿ ಮಾಡಿಸಬಹುದು . 182 ದಿನಗಳ ಕಡ್ಡಾಯ ವಾಸ್ತವ್ಯ ಅನಿವಾಸಿ ಭಾರತೀಯರಿಗೆ ಅನ್ವಯವಾಗುವುದಿಲ್ಲ . ನೀವು ಆಧಾರ್ ಕೇಂದ್ರಕ್ಕೆ ಭೇಟಿ ನೀಡಿ ಅನಿವಾಸಿ ಭಾರತೀಯನೆಂದು ಆಧಾರ್ ಗೆ ನೋಂದಣಿ ಮಾಡಿಸಬಹುದು. ಆದರೆ ಅನಿವಾಸಿ ಭಾರತೀಯ ಅದನ್ನು ಧೃಢ ಪಡಿಸಲು ಭಾರತದ ಪಾಸ್ ಪೋರ್ಟ್ ಕಡ್ಡಾಯ . ಯು ಐ ಡಿ ಐ ಎ ಪರಿಗಣಿಸಿರುವ ಯಾವುದೇ ದಾಖಲೆಯನ್ನು (ಈ ಕೈಪಿಡಿ ಯ ಪರಿಚ್ಛೇದ 1 ವಿಭಾಗ 13.1 ನ್ನು ಗಮನಿಸಿ ) ನಿಮ್ಮ ಭಾರತೀಯ ವಿಳಾಸದ ಸಾಕ್ಷಿಯಾಗಿ ಸಲ್ಲಿಸಬಹುದು.

( ಸಂದೇಶದ ಮುಖ್ಯಾಂಶ : ಅನಿವಾಸಿ ಭಾರತೀಯರಿಗೆ ಆಧಾರ್ ನೋಂದಣಿ ಮಾಡಲು ಗುರುತಿನ ಸಾಕ್ಷಿಯಾಗಿ ಪಾಸ್ ಭಾರತೀಯ ಪೋರ್ಟ್ ಕಡ್ಡಾಯ )

## 1.3 ಆಧಾರ್ ನ ವೈಶಿಷ್ಟ್ಯಗಳು

### 1.3.1 ಆಧಾರ್ ಒಂದು ಗುರುತಿಸುವಿಕೆಯ ಸಂಖ್ಯೆ ಮಾತ್ರ

ಆಧಾರ್, ವ್ಯಕ್ತಿಗೆ ವಿತರಿಸುವ 12 ಅಂಕೆಗಳ ಒಂದು ಅನನ್ಯ ಐ ಡಿ . ಆಧಾರ್ , ವ್ಯಕ್ತಿಯ ಗುರುತಿಸುವಿಕೆಯಲ್ಲಿ ಡೆಮೊಗ್ರಾಫಿಕ್ ಮಾಹಿತಿ. ( ಹೆಸರು, ಹುಟ್ಟಿದ ದಿನಾಂಕ, ಲಿಂಗ ಹಾಗೂ ವಿಳಾಸ ) ಮುಖದ ಭಾವಚಿತ್ರ , ಬೆರಳಚ್ಚು ಹಾಗೂ ಕಣ್ಣಿನ ಪಾಪೆಯ ಮಾಹಿತಿಯನ್ನು ಬಳಸಿಕೊಳ್ಳುತ್ತದೆ . ಈ ಎಲ್ಲಾ ಮಾಹಿತಿ ಕಡ್ಡಾಯ . ಜೊತೆಗೆ ನಿಮ್ಮ ಮೊಬೈಲ್ ಫೋನ್ ನಂಬರ್ ಮತ್ತು ಇ ಮೇಲ್ ನ್ನೂ ಸಹ ಸೇರ್ಪಡೆ ಮಾಡಿಕೊಳ್ಳುವ ಆಯ್ಕೆ ನಿಮಗಿದೆ .

### 1.3.2 ಆಧಾರ್ ಒಂದು ಗುರುತಿನ ಸಂಖ್ಯೆ ಮಾತ್ರ ಅದಕ್ಕಿಂತ ಬೇರೇನೂ ಅಲ್ಲ

ಆಧಾರ್ ಸಂಖ್ಯೆ ಒಂದು ಗುರುತಿನ ಪುರಾವೆ . ( ಆಧಾರ್ ಸಂಖ್ಯೆ ) , ಅದನ್ನು ಹೊಂದಿದ್ದಾರೆ ಎಂಬ ಕಾರಣಕ್ಕಾಗಿ ಯಾರಿಗೂ ಪೌರತ್ವದ ಹಕ್ಕನ್ನು ನೀಡುವುದಿಲ್ಲ . ಯಾವುದೇ ಬುದ್ಧಿವಂತಿಕೆ ತೋರದೆ ಆಧಾರ್ ಸಂಖ್ಯೆ ನೀಡಲಾಗುತ್ತದೆ. ಇದರಿಂದಾಗಿ ಜನರನ್ನು ಜಾತಿ, ಧರ್ಮ, ಆದಾಯ ಹಾಗೂ ಪ್ರಾದೇಶಿಕತೆ ನಿರೂಪಿಸಲು ಇದನ್ನು ಬಳಸಲು ಸಾಧ್ಯವಿಲ್ಲ.

### 1.4 ಆಧಾರ್ ನ ಬಳಕೆ

ಆಧಾರ್ ಪದ್ಧತಿ , ನಿವಾಸಿಗಳಿಗೆ ದೇಶಾದ್ಯಂತ ಆಫ್ ಲೈನ್ / ಆನ್ ಲೈನ್ ಮೂಲಕ ಗುರುತು ಪರಿಶೀಲನೆ ನೀಡುವ ಒಂದು ಮೂಲವಾಗಿದೆ. ಒಮ್ಮೆ ನೀವು ನೋಂದಣಿಗೊಂಡರೆ ಲಭ್ಯತೆಗೆ ಅನುಗುಣವಾಗಿ ಇಲೆಕ್ಟ್ರಾನಿಕ್ ಮಾಧ್ಯಮ, ಆನ್ ಲೈನ್ - ಆಫ್ ಲೈನ್ ಮೂಲಕ ಪರಿಶೀಲಿಸಿ ಅನೇಕ ಬಾರಿ ನಿಮ್ಮ ಆಧಾರ್ ಸಂಖ್ಯೆ ಬಳಸಿ ನಿಮ್ಮ ಗುರುತು ಸ್ಥಾಪಿಸಬಹುದು / ದೃಡೀಕರಿಸಬಹುದು . ಇದರಿಂದಾಗಿ ಪ್ರತಿಬಾರಿ ನೀವು ಸೇವೆಗಳನ್ನು, ಸಬ್ಸಿಡಿಗಳನ್ನು ಪಡೆಯಬಯಸಿದಾಗಲೆಲ್ಲಾ ನಿಮ್ಮ ಗುರುತು ದೃಡೀಕರಿಸಿ ದಾಖಲೆಗಳನ್ನ ಸಲ್ಲಿಸುವ ಅವಶ್ಯಕತೆ ಇಲ್ಲದಂತಾಗುತ್ತದೆ.

ಆಧಾರ್ , ಎಲ್ಲೇ ಆದರು ಯಾವುದೇ ಸಮಯದಲ್ಲೂ , ಆನ್ ಲೈನ್ ಮೂಲಕ ಆಧಾರ್ ದೃಡೀಕರಣದಿಂದ ಸುಲಭವಾಗಿ ಒಯ್ಯಬಲ್ಲ ಗುರುತಿನ ಪುರಾವೆಯಾಗಿದೆ.

## 2 ಆಧಾರ್ ಗೆ ನೋಂದಣಿ ಮಾಡುವುದು ಹೇಗೆ ?

ಆಧಾರ್ ನೋಂದಣಿ ಸಂಪೂರ್ಣ ಉಚಿತವಾಗಿದ್ದು , ಆಧಾರ್ ಪಡೆಯುವ ಪ್ರಕ್ರಿಯೆಯ ಸಂದರ್ಭದಲ್ಲಿ ನೀವು ಸಾಮಾಜಿಕ ಹಾಗೂ ಬಯೋಮೆಟ್ರಿಕ್ ನ ಕನಿಷ್ಠ ಮಾಹಿತಿ ನೀಡಿ ನೋಂದಾಯಿತರಾಗಬೇಕು . ದಯವಿಟ್ಟು ಗಮನಿಸಿ - ಆಧಾರ್ ಗೆ ನೀವು ಒಮ್ಮೆ ಮಾತ್ರ ನೋಂದಣಿಯಾಗಬೇಕಾದ ಅವಶ್ಯಕತೆ ಇದೆ .

## 2.1 ನೋಂದಣಿ ಪ್ರಕ್ರಿಯೆ

ನೀವು ಭಾರತ ನಿವಾಸಿ ಅಥವಾ ಅನಿವಾಸಿ ಭಾರತೀಯ ಆಗಿದ್ದರೂ , ಆಧಾರ್ ಸಂಖ್ಯೆ ಪಡೆಯಲು ನೋಂದಣಿಯಾಗಲು ಅನುಸರಿಸಬೇಕಾದ ಪ್ರಕ್ರಿಯೆಯನ್ನು ಈ ಕೆಳಗೆ ವಿವರಿಸಿದೆ.

- ಆಧಾರ್ ನೋಂದಣಿ ಕೇಂದ್ರಕ್ಕೆ ಭೇಟಿ ನೀಡಿ
- ಆಧಾರ್ ನೋಂದಣಿ / ಅರ್ಜಿ ಭರ್ತಿ ಮಾಡಿ
- ಡೆಮೊಗ್ರಾಫಿಕ್ ಹಾಗೂ ಬಯೋಮೆಟ್ರಿಕ್ ದತ್ತಾಂಶ ನೀಡಿ

- ಗುರುತಿನ ಪುರಾವೆ ( ಪಿ ಓ ಐ ) ಮತ್ತು ವಿಳಾಸದ ಪುರಾವೆ (ಪಿ ಓ ಎ ) ಹಾಗುಉಜನ್ಮ ದಿನಾಂಕದ ಪುರಾವೆ ( ಡಿ ಓ ಬಿ ) ಯ ಮಾನ್ಯವಾದ ದಾಖಲೆಗಳನ್ನು ಸ್ಕ್ಯಾನ್ ಮಾಡಲು ಸಲ್ಲಿಸಿ .
- ನಿಮ್ಮ ಮೂಲ ದಾಖಲೆಗಳನ್ನು ಹಾಗೂ ನೋಂದಣಿ ಐ ಡಿ ಇರುವ ಸ್ವೀಕೃತಿ ಚೀಟಿಯನ್ನು ಹಿಂಪಡೆಯಿರಿ.

ಒಂದು ವೇಳೆ ನಿವಾಸಿ ' ಕುಟುಂಬ ಮುಖ್ಯಸ್ಥನ ಆಧಾರದ ಮೇಲೆ ನೋಂದಣಿ ' ( ಉಲ್ಲೇಖ ,ವಿಭಾಗ 2.1.1.2) ಅಡಿಯಲ್ಲಿ ನೋಂದಾಯಿತರಾಗುತ್ತಿದ್ದರೆ ಅವನು / ಅವಳು ಸಂಬಂಧದ ಪುರಾವೆ ( ಪಿ ಓ ಅರ್ ) ದಾಖಲೆಯನ್ನು ಮಾತ್ರ ನೀಡುವ ಅಗತ್ಯವಿರುತ್ತದೆ.

ಆಧಾರ್ ನೋಂದಣಿ ಅರ್ಜಿ ಡೌನ್ ಲೋಡ್ ಮಾಡಲು ಸ್ಕ್ಯಾನ್ ಮಾಡಿ :

https://uidai.gov.in/images/aadhaar ನೋಂದಣಿ ತಿದ್ದುಪಡಿ ಅರ್ಜಿ 2.1.ಪಿಡಿಎಫ್ ಅವತರಣಿಕೆ

ಸಮೀಪವಿರುವ ಆಧಾರ್ ಕೇಂದ್ರದ ವಿವರ ತಿಳಿಯಲು ಸ್ಕ್ಯಾನ್ ಮಾಡಿ .

http://appointments.uidai.gov.in/easearch.aspx

ಆಧಾರ್ ಕೇಂದ್ರಕ್ಕೆ ಮೂಲ ದಾಖಲೆಗಳನ್ನ ತೆಗೆದುಕೊಂಡು ಹೋಗಿ . ದಾಖಲೆಗಳನ್ನು ಸ್ಕ್ಯಾನ್ ಮಾಡಿ ನಿಮಗೆ ಹಿಂದಿರುಗಿಸುತ್ತಾರೆ.ಛಾಯಾ ಪ್ರತಿಯ ಅವಶ್ಯಕತೆ ಇಲ್ಲ .

ಕುಟುಂಬದ ಸದಸ್ಯ ದಾಖಲೆ ಇಲ್ಲದವರು / ಮನೆ ಇಲ್ಲದವರು / ಅನಾಥರು ಮುಂತಾದವರು , ಅಥವಾ ಬಯೋಮೆಟ್ರಿಕ್ ಅಪೇಕ್ಷೆ ಅಂದರೆ ಕಣ್ಣಿನ ಅಥವಾ ಕೈ ಬೆರಳು ವಿಫಲತೆ ಇರುವ ನಿವಾಸಿಗಳು ಈ ಮೊದಲು ಹೇಳಿರುವ ನೋಂದಣಿ ಪ್ರಕ್ರಿಯೆಯಿಂದ ವಿನಾಯಿತಿ ಹೊಂದಿರುತ್ತಾರೆ . ಹೀಗೆ ಈ ಎಲ್ಲ ರೀತಿಯ ನೋಂದಣಿ ವಿವರವನ್ನ ಈ ಮುಂದೆ ತಿಳಿಸಿದೆ.

### 2.1.1.1 ದಾಖಲೆ ಆಧಾರಿತ ನೋಂದಣಿ

ನೋಂದಣಿ ಅರ್ಜಿಯಲ್ಲಿ ತಿಳಿಸಿರುವ ಮಾನ್ಯತೆ ಪಡೆದಿರುವ ದಾಖಲೆಗಳ ಪಟ್ಟಿ ಅನುಸಾರ , ಗುರುತಿನ ಪುರಾವೆ ( ಪಿ ಓ ಐ ) , ವಿಳಾಸದ ಪುರಾವೆ ( ಪಿ ಓ ಎ ) ಸಲ್ಲಿಸಿ ಆಧಾರ್ ಗೆ ನೋಂದಣಿ ಮಾಡಿಕೊಳ್ಳ ಬಹುದು ಅಥವಾ ಯು ಐ ಡಿ ಎ ಐ ವೆಬ್ ಸೈಟ್ ಪರಿಚ್ಛೇಧ 1 ವಿಭಾಗ 13.1 ವನ್ನ ನೋಡಿ.

- ಗುರುತಿನ ಪುರಾವೆ ( ಪಿ ಓ ಐ ) - ಕಡ್ಡಾಯ
- ವಿಳಾಸದ ಪುರಾವೆ ( ಪಿ ಓ ಎ - ಕಡ್ಡಾಯ

- ಜನ್ಮ ದಿನಾಂಕ ( ಡಿ ಓ ಬಿ ) - ಯು ಐ ಡಿ ಎ ಐ  ತಿಳಿಸಿರುವ ದಾಖಲೆ ಪಟ್ಟಿ ಅನುಸಾರ ಜನ್ಮದಿನಾಂಕದ ಯಾವುದಾದರು ಒಂದು ಮಾನ್ಯ ದಾಖಲೆಯನ್ನ ನೀವು ಸಲ್ಲಿಸುವ ಅವಶ್ಯಕತೆ ಇದೆ . ನಿಮ್ಮ ಬಳಿ ದಾಖಲೆ ಇಲ್ಲದಿದ್ದಲ್ಲಿ ನೀವೇ ನಿಮ್ಮ ಜನ್ಮ ದಿನಾಂಕವನ್ನ ಘೋಷಿಸಿಕೊಳ್ಳಬಹುದು. ಅಥವಾ ಅಂದಾಜು ವಯಸ್ಸು ನೀಡಬಹುದು .

ನಿಮ್ಮ ಬಳಿ ಸಮಂಜಸ ದಾಖಲೆ ಇದ್ದಲ್ಲಿ , ಆಧಾರ್ ನೋಂದಣಿ ಗೆ ಅದನ್ನು ಸಲ್ಲಿಸಬೇಕು . ಒಂದು ವೇಳೆ ನಿಮ್ಮ ಹೆಸರಿನಲ್ಲಿ ದಾಖಲೆ ಇಲ್ಲದೇ ಇದ್ದಲ್ಲಿ ಅಧಿಕೃತ ಅಧಿಕಾರಿ ( ಪರಿಚ್ಛೇಧ 2 ರ ಪ್ರಕಾರ )  ನೀಡಿದ ಪ್ರಮಾಣ ಪತ್ರವನ್ನು ಸಹ ನೀವು ನೀಡಬಹುದು. ಈ ಬಗೆಯ ಪ್ರಮಾಣಪತ್ರದ ನಿರ್ದಿಷ್ಟ ನಮೂನೆಯ ಬಗ್ಗೆ  ಯು ಐ ಡಿ ಎ ಐ  ವಿವರಿಸಿದೆ .

ಒಪ್ಪಬಹುದಾದ ಪೂರಕ ದಾಖಲೆಗಳ ಪಟ್ಟಿಯ ಪರಿಶೀಲನೆ ಈ ಅಂತರ್ಜಾಲದಲ್ಲಿ ಲಭ್ಯವಿದೆ .

https://uidai.gov.in/images/commdoc/valid_documents_list.pdf

ಒಪ್ಪಬಹುದಾದ ಪೂರಕ ದಾಖಲೆಗಳ ಪಟ್ಟಿಗಾಗಿ ಸ್ಕ್ಯಾನ್ ಮಾಡಿ :

https://appointments.uidai.gov.in/easearch.aspx

ಆಧಾರ್ ನೋಂದಣಿ ಗಾಗಿ ಬಳಸುವ ದಾಖಲೆಗಳು ನಿಮ್ಮ ಹೆಸರನ್ನ ಹೊಂದಿರಬೇಕು .

**2.1.1.2 ಕುಟುಂಬ ಮುಖ್ಯಸ್ಥ ( ಹೆಚ್ ಓ ಎಫ್ ) ಆಧಾರಿತ ನೋಂದಣಿ**

ಸದಸ್ಯರ  ವೈಯಕ್ತಿಕ ದಾಖಲೆಗಳು ಲಭ್ಯವಿಲ್ಲದಿರುವಾಗ , ಕುಟುಂಬ ಮುಖ್ಯಸ್ಥ ಆಧಾರಿತ ನೋಂದಣಿ ಮೂಲಕ ಕೆಳಗಿನ ವಿವರಗಳನ್ನ ಸಲ್ಲಿಸಿ ಕುಟುಂಬ ಸದಸ್ಯರ ನೋಂದಣಿ ಮಾಡಿಕೊಳ್ಳಬಹುದು.

- ಕುಟುಂಬ ಮುಖ್ಯಸ್ಥನ ಹೆಸರು
- ನಿವಾಸಿ ಹಾಗೂ ಕುಟುಂಬ ಮುಖ್ಯಸ್ಥನ ಸಂಬಂಧದ ಪುರಾವೆ
- ಕುಟುಂಬ ಮುಖ್ಯಸ್ಥನ ಆಧಾರ್ ಸಂಖ್ಯೆ
- ನೋಂದಣಿ ಸಮಯದಲ್ಲಿ ಕುಟುಂಬ ಮುಖ್ಯಸ್ಥನ ಬಯೋಮೆಟ್ರಿಕ್ ಖಾತ್ರಿ ಪಡಿಸಿಕೊಳ್ಳುವುದು .

ಬಾಕ್ಸ್ ಮೆಸೇಜ್ : ಕುಟುಂಬ ಮುಖ್ಯಸ್ಥ ಆಧಾರಿತ ನೋಂದಣಿಗೆ  ನೋಂದಣಿ ಸಮಯದಲ್ಲಿ ಕುಟುಂಬ ಮುಖ್ಯಸ್ಥ ಬಯೋಮೆಟ್ರಿಕ್ ಖಾತ್ರಿ ಮಾಡಬೇಕು .

**2.1.1.3 ಪರಿಚಯಕಾರ ಆಧಾರಿತ ನೋಂದಣಿ**

ಮೊದಲು ತಿಳಿಸಿದ ಯಾವುದೇ ದಾಖಲೆಗಳನ್ನು ಹೊಂದಿಲ್ಲವಾದರೆ ಪರಿಚಯಕಾರ ನೋಂದಣಿ ಅಡಿಯಲ್ಲಿ ನೀವು ನೋಂದಣಿಗೊಳ್ಳಬಹುದು . ಈ ಪರಿಚಯಕಾರರು ರಿಜಿಸ್ಟ್ರಾರ್ ಗಳಿಂದ ಪರಿಶೀಲಿಸಲ್ಪಟ್ಟ ಅಧಿಕಾರಿಗಳಾಗಿರುತ್ತಾರೆ . ಪರಿಚಯಕಾರರು ಇವರುಗಳೂ ಆಗಿರಬಹುದು .

- ರಿಜಿಸ್ಟ್ರಾರ್ ರ ಕಛೇರಿ ಸಿಬ್ಬಂದಿ
- ಚುನಾಯಿತ  ಸ್ಥಾನೀಯ ಸಂಸ್ಥೆಯ ಸದಸ್ಯರು
- ಸ್ಥಾನೀಯ ಆಡಳಿತ ಸಂಸ್ಥೆಗಳ ಸದಸ್ಯರು
- ಅಂಚೆ ಪೇದೆ
- ಉಪಾಧ್ಯಾಯರು  ಮುಂತಾದ ಪ್ರಭಾವೀ ವ್ಯಕ್ತಿಗಳು
- ಆರೋಗ್ಯ ಕಾರ್ಯಕರ್ತರು
- ವೈದ್ಯರು
- ಅಂಗನವಾಡಿ / ಆಶಾ ಕಾರ್ಯಕರ್ತರು
- ಸ್ಥಾನೀಯ ಏನ್ ಜಿ ಓ ಪ್ರತಿನಿಧಿಗಳು

ಪರಿಚಯಕಾರ ಆಧಾರಿತ ನೋಂದಣಿ ಸಂಧರ್ಭದಲ್ಲಿ ಸಂಗ್ರಹಿಸುವ ಮಾಹಿತಿಗಳು -

- ಪರಿಚಯಕಾರರ ಹೆಸರು
- ಪರಿಚಯಕಾರರ ಆಧಾರ್ ಸಂಖ್ಯೆ
- ಪರಿಚಯಕಾರರ ಬಯೋಮೆಟ್ರಿಕ್ ನ ಯಾವುದೋ ಒಂದು ಮಾಹಿತಿ

### 2.1.1.4  ಮಕ್ಕಳಿಗೆ ಆಧಾರ್ ನೋಂದಣಿ

ಮಕ್ಕಳು , ನವಜಾತ ಶಿಶುವಿಗೂ ಸಹ ಆಧಾರ್ ನೋಂದಣಿ ಮಾಡಬಹುದು.ಮಗುವಿನ ವಯಸ್ಸಿಗೆ ಅನುಗುಣವಾಗಿ ಕೆಳಗೆ ತಿಳಿಸಿರುವ ಎರಡು ವಿಧಾನಗಳಲ್ಲಿ ನೋಂದಣಿ ಮಾಡಬಹುದು.

**ಐದು  ವರುಷದೊಳಗಿನ  ಮಕ್ಕಳಿಗೆ**

ನವಜಾತ ಶಿಶುವಿನಿಂದ ಐದು ವರುಷದೊಳಗಿನ   ಮಗುವಿಗೆ ನೋಂದಣಿ ಮಾಡಿಸುವಾಗ ಮಗುವಿನ ಪೋಷಕ /  ಪಾಲಕ ರೊಬ್ಬರ  ಆಧಾರ್  ದೃಡೀಕರಣ ಅಗತ್ಯವಿರುತ್ತದೆ .ನೋಂದಣಿ ಸಂದರ್ಭದಲ್ಲಿ ಐದು ವರುಷದೊಳಗಿ ಮಕ್ಕಳ ಬಯೋ ಮೆಟ್ರಿಕ್

ದತ್ತಾಂಶ ವನ್ನು ಸಂಗ್ರಹಿಸುವುದಿಲ್ಲ . ಮಗುವಿನ ಹೆಸರು , ಹುಟ್ಟಿದ ದಿನಾಂಕ , ಲಿಂಗ ಹಾಗೂ ಭಾವಚಿತ್ರವನ್ನ ಮಾತ್ರ ಪಡೆಯುತ್ತಾರೆ. ಮಗುವಿನ ಆಧಾರನ್ನು ಪೋಷಕ / ಪಾಲಕರ ಆಧಾರ್ ಗೆ ಜೋಡಿಸಲಾಗುತ್ತದೆ .

ಪೋಷಕ / ಪಾಲಕರು ಕೆಳಗೆ ತಿಳಿಸಿರುವ ದಾಖಲೆ ಸಹಿತ ಮಗುವನ್ನು ಸಮೀಪದ ಯಾವುದೇ ಆಧಾರ್ ಕೇಂದ್ರಕ್ಕೆ ಕರೆದುಕೊಂಡು ಹೋಗಬೇಕಾಗುತ್ತದೆ.

- ಜನನದ ರಿಜಿಸ್ಟ್ರಾರ್, ನಗರ ಸಭೆ ಅಥವಾ ಸೂಚಿತ ಯಾವುದೇ ಸ್ಥಾನಿಯ ( ತಾಲೂಕು / ತಹಸೀಲ್ ಮುಂತಾದ ) ಆಡಳಿತ ಸಂಸ್ಥೆಗಳು ನೀಡಿರುವ ಜನನ ಪ್ರಮಾಣ ಪತ್ರ ಅಥವಾ ಹೆರಿಗೆ ಆಸ್ಪತ್ರೆ ನೀಡುವ ನಿರ್ಗಮ ಪತ್ರ / ಚೀಟಿ .
- ಮಗುವಿನ ತಂದೆ ತಾಯಿ ಇಬ್ಬರೂ ಇರುವುರಾದರೆ ಅದರಲ್ಲಿ ಯಾರಾದರು ಒಬ್ಬರ , ಆದ್ಯತೆಯಲ್ಲಿ ತಾಯಿಯ ಅಥವಾ ಪಾಲಕರೊಬ್ಬರ ಆಧಾರ್ / ನೋಂದಣಿ ಚೀಟಿ .

ದಯವಿಟ್ಟು ಗಮನಿಸಿ , ನೀವು ನಿಮ್ಮ ಆಧಾರ್ನಲ್ಲಿನ ವಿಳಾಸವನ್ನು ಅಪ್ ಡೇಟ್ ಮಾಡಿ ಹೊಸ ವಿಳಾಸವನ್ನು ನಿಮ್ಮ ಮಗುವಿನ ಆಧಾರ್ನಲ್ಲಿ ಇರಬಯಸುವಿರಾದರೆ ಮಗುವಿನ ಆಧಾರ್ ನೋಂದಣಿ ಮಾಡಿಸುವ ಮೊದಲು ನಿಮ್ಮ ಆಧಾರ್ ಮಾಹಿತಿಯನ್ನು ಅಪ್ ಡೇಟ್ ಮಾಡಿಸಿ. ಅಪ್ ಡೇಟ್ ಆದನಂತರ ನಿಮ್ಮ ಮಗುವಿನ ಆಧಾರ್ ನೋಂದಣಿ ಗೆ ನಿಮ್ಮ ಅಪ್ ಡೇಟ್ ಆದ ಆಧಾರ್ ನ ಬಳಸಿ .

**5 ರಿಂದ 18 ವಯೋಮಾನದ ಮಕ್ಕಳಿಗೆ**

ಸಮೀಪದ ಯಾವುದೇ ಆಧಾರ್ ಕೇಂದ್ರಕ್ಕೆ ಕರೆದುಕೊಂಡು ಹೋಗಬಹುದು.

- ಮಗುವಿನ ಸ್ವಂತ ದಾಖಲೆಗಳಿಂದ ನೋಂದಣಿ ಮಾಡಿಸುವುದಾದರೆ - ಅಧಿಕೃತ ವಿದ್ಯಾ ಸಂಸ್ಥೆ ನೀಡುವ ಮಗುವಿನ ಶಾಲಾ ಐ ಡಿ ಅಥವಾ ಯು ಐ ಡಿ ಎ ಐ ಒಪ್ಪಿರುವ ದಾಖಲೆ
- ಕುಟುಂಬ ಮುಖ್ಯಸ್ಥ ಆಧಾರಿತ ಅಡಿ ನೋಂದಣಿ ಮಾಡಿಸುವುದಾದರೆ - ಮಗು ಮಾನ್ಯತೆ ಹೊಂದಿದ ಶಾಲಾ ಐ ಡಿ ಅಥವಾ ಯಾವುದೇ ಸ್ವೀಕೃತ ದಾಖಲೆಗಳನ್ನು ಹೊಂದಿಲ್ಲದೇ ಇರುವಾಗ ಪಾಲಕ / ಪೋಷಕರು ಕುಟುಂಬ ಮುಖಸ್ಥ ಆಧಾರ ಅಡಿಯಲ್ಲಿ ಮಗುವಿಗೆ ನೋಂದಣಿ ಮಾಡಿಸಬಹುದು . ಆಗ ಸಂಬಂಧ ಪುರಾವೆ ( ಪಿ ಓ ಅರ್ ) ದಾಖಲೆಯ ಅವಶ್ಯಕತೆ ಇರುತ್ತದೆ ( ಉಲ್ಲೇಖ 2.1.1.2 ).

ಸೂಚನೆ: ಅಪ್ರಾಪ್ತರ ಆಧಾರ್ ನೋಂದಣಿ ಮಾಡಿಸಲು **ಅಪ್ರಾಪ್ತರ ಪರವಾಗಿ** ಪೋಷಕ / ಪಾಲಕರು ಆಧಾರ್ ನೋಂದಣಿ ಗೆ ಒಪ್ಪಿಗೆ ನೀಡಬೇಕಾಗುತ್ತದೆ.

ಶಾಲಾ ಐ ಡಿ ಯನ್ನು ಮಗುವಿನ ಆಧಾರ್ ನೋಂದಣಿ ಗೆ ಬಳಸಬಹುದು .

**2.1.1.5 ಬಯೋಮೆಟ್ರಿಕ್ ಹೊರತಾದ ನಿವಾಸಿಗೆ ನೋಂದಣಿ**

ಬಯೋಮೆಟ್ರಿಕ್ ಹೊರತಾದ ಅಂದರೆ ಬೆರಳು / ಕಣ್ಣು ಕಳೆದುಕೊಂಡಿರುವ ನಿವಾಸಿಗಳು ನೋಂದಣಿ ಮಾಡುವ ಸಂದರ್ಭದಲ್ಲಿ ಈ ಕೆಳಗಿನ ಮಾಹಿತಿಗಳ ಸಂಗ್ರಹ ಅವಶ್ಯ .

- ಸಂಪೂರ್ಣ ಡೆಮೊಗ್ರಾಫಿಕ್ ಮಾಹಿತಿ .
- ಒಂದು ಕಣ್ಣಿನ ವರ್ಣಪಟಲ, ಎರಡೂ ಕಣ್ಣಿನ ವರ್ಣಪಟಲ ಸಾಧ್ಯವಿದ್ದರೆ .
- ಕೈ ಬೆರಳು / ಬೆರಳುಗಳನ್ನು ಕಳೆದುಕೊಂಡಿರುವ ಸಂದರ್ಭದಲ್ಲಿ ಉಳಿದ ಬೆರಳುಗಳ ಬೆರಳಚ್ಚು .
- ಅಂಗ ನ್ಯೂನತೆಯ ಭಾವಚಿತ್ರ .

## 2.2 ಆಧಾರ್ ನೋಂದಣಿಗೆ ನೆನಪಿನಲ್ಲಿಡಬೇಕಾದ ಅಂಶಗಳು

- ನೋಂದಣಿ ಸಮಯದಲ್ಲಿ ನಿವಾಸಿ ಆಯ್ಕೆಮಾಡಿಕೊಳ್ಳುವ ಎರಡು ಭಾಷೆ ಅಂದರೆ ಕಡ್ಡಾಯವಾಗಿ ಇಂಗ್ಲಿಷ್ ಹಾಗೂ ಸ್ಥಳೀಯ ಭಾಷೆಯಲ್ಲಿ ಆಧಾರ್ ದತ್ತಾಂಶವನ್ನು ಸಂಗ್ರಹಿಸಲಾಗುತ್ತದೆ. ನಿವಾಸಿಯು ಹಿಂದಿ, ತೆಲಗು, ತಮಿಳು, ಕನ್ನಡ, ಮಲಯಾಳಂ, ಪಂಜಾಬಿ , ಮರಾಟಿ ,ಗುಜರಾತಿ , ಬೆಂಗಾಳಿ , ಒಡಿಯ , ಅಸ್ಸಾಮಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಆಯ್ಕೆಮಾಡಿಕೊಳ್ಳಬಹುದು .
- ಆಧಾರ್ ನೋಂದಣಿ ಅರ್ಜಿಯಲ್ಲಿ ನೀವು ನೀಡುವ ನಿಮ್ಮ ಮಾಹಿತಿ ನಿಮ್ಮೆದುರು ಇರುವ ಟಿ ವಿ ಪರದೆ ಮೇಲೆ ಗೋಚರವಾಗುತ್ತದೆ . ನಿಮ್ಮ ಅರ್ಜಿಯನ್ನು ಆಪರೇಟರ್ ನೋಂದಣಿಗೆ ಕಳುಹಿಸುವ ಮುನ್ನ ಆಪರೇಟರ್ ಇಂಗ್ಲಿಷ್ ಹಾಗೂ ಸ್ಥಳೀಯ ಭಾಷೆಯಲ್ಲಿ ದಾಖಲಿಸಿರುವ ನಿಮ್ಮ ಎಲ್ಲಾ ಮಾಹಿತಿಗಳನ್ನು ನೀವು ಪರಿಶೀಲಿಸಿ ಸರಿಯಾಗಿದೆ ಎಂದು ಖಾತ್ರಿಪಡಿಸಿಕೊಳ್ಳುವುದು ತುಂಬಾ ಮುಖ್ಯ . ನೀವು ಸಹಿ ಮಾಡುವ ಮೊದಲು ಸ್ವೀಕೃತಿ ಪತ್ರದಲ್ಲಿನ ಮಾಹಿತಿಗಳನ್ನೂ ನೀವು ಪರಿಶೀಲಿಸಬಹುದು .
- ನಿವಾಸಿ ಒಮ್ಮೆ ಮಾತ್ರ ನೋಂದಣಿ ಮಾಡಿಸುವ ಅವಶ್ಯಕತೆ ಇರುತ್ತದೆ . ಏಕೆಂದರೆ ಪ್ರಾಧಿಕಾರ ಸೂಚಿಸದ ಹೊರತು ಮತ್ತೆ ಮತ್ತೆ ನೋಂದಣಿ ಮಾಡಿಸುವುದು ತಿರಸ್ಕೃತಿಗೆ ಕಾರಣವಾಗುತ್ತದೆ .
- ಆಧಾರ್ ಸಿದ್ಧವಾಗುವ ನಿರೀಕ್ಷಣಾ ಅವಧಿ ನಿವಾಸಿಯ ದತ್ತಾಂಶ ಸಂಗ್ರಹಿತ ಮತ್ತು ಸ್ವೀಕೃತಿಯ ನಂತರದ 90 ದಿವಸಗಳವರೆಗೂ ಒದಗಬಹುದು .

ನಿಮ್ಮ ಆಧಾರ್ ನೋಂದಣಿಯನ್ನು ಆಪರೇಟರ್ ಪ್ರಾಧಿಕಾರಕ್ಕೆ ಸಲ್ಲಿಸುವ ಮೊದಲು ಇಂಗ್ಲಿಷ್ ಹಾಗೂ ಸ್ಥಳೀಯ ಭಾಷೆಯಲ್ಲಿ ಇರುವ ಎಲ್ಲಾ ವಿವರಗಳನ್ನು ಜಾಗರೂಕತೆಯಿಂದ ಪರಿಶೀಲಿಸಿ ಸರಿಪಡಿಸಿಕೊಳ್ಳಿ .

## 2.3 ಆಧಾರ್ ನೋಂದಣಿ ಕೇಂದ್ರ

ಆಧಾರ್ ಸೇವೆಗಳನ್ನು ಒದಗಿಸಲು ದೇಶದ ಉದ್ದಗಲಕ್ಕೂ ಆಧಾರ್ ನೋಂದಣಿ ಕೇಂದ್ರಗಳನ್ನು ಯು ಐ ಡಿ ಎ ಐ ತೆರೆದಿದೆ . ಇವು ಬ್ಯಾಂಕ್ , ಅಂಚೆ ಕಛೇರಿಗಳು , ಬಿ ಎಸ್ ಏನ್ ಎಲ್ ಕೇಂದ್ರಗಳು, ಸಿ ಎಸ್ ಸಿ ಗಳು , ನಿಯೋಜಿತ ರಾಜ್ಯ ಸರ್ಕಾರಿ ಕಛೇರಿಗಳು ಹಾಗೂ ಅದಕ್ಕಾಗೇ ಇರುವ ಆಧಾರ್ ಸೇವಾ ಕೇಂದ್ರಗಳಲ್ಲಿ ಲಭ್ಯ . ಯಾವುದೇ ಆಧಾರ್ ನೋಂದಣಿ ಕೇಂದ್ರಕ್ಕೆ ಭೇಟಿ ನೀಡಿ ನೀವು ಆಧಾರ್ ಗೆ ನೋಂದಣಿಯಾಗಬಹುದು . ಸಾಮಾಜಿಕ ಮಾಹಿತಿ ( ಹೆಸರು, ವಿಳಾಸ, ಜನ್ಮದಿನಾಂಕ, ಲಿಂಗ, ಮೊಬೈಲ್ ಸಂಖ್ಯೆ ,ಇ ಮೇಲ್ ) ಅಥವಾ ಬಯೋಮೆಟ್ರಿಕ್ಸ್ ( ಭಾವಚಿತ್ರ, ಬೆರಳಚ್ಚು ಅಥವಾ ವರ್ಣಪಟಲ ಸ್ಕ್ಯಾನಿಂಗ್ ) ಇವುಗಳ ಅಪ್ ಡೇಟ್ ಗಾಗಿ ನಿಮ್ಮ ಆಧಾರ್ ಹಾಗೂ ಸಮಂಜಸ ಬೆಂಬಲಿತ ದಾಖಲೆಗಳೊಂದಿಗೆ ಆಧಾರ್ ಸೇವಾ ಕೇಂದ್ರಕ್ಕೆ ಭೇಟಿ ನೀಡಬಹುದು .

### 2.3.1 ನಿಮ್ಮ ಹತ್ತಿರದ ಆಧಾರ್ ನೋಂದಣಿ ಕೇಂದ್ರವನ್ನು ಪತ್ತೆಮಾಡುವುದು .

ನಿಮ್ಮ ಸಮೀಪದ ಆಧಾರ್ ಕೇಂದ್ರದ ವಿವರಗಳನ್ನು ಇವುಗಳಿಂದ ಪಡೆಯಬಹುದು .

- 1947 ಕ್ಕೆ ಕರೆಮಾಡುವುದರಿಂದ .
- ಆಧಾರ್ ಅಂತರ್ಜಾಲದಿಂದ ; http://appointments.uidai.gov.in/easearch.aspx
- ಎಂ ಆಧಾರ್ ಆಪ್ ನಿಂದ

ಹೇಗೆ ನೀವು ಆಧಾರ್ ಕೇಂದ್ರವನ್ನು ಪತ್ತೆಮಾದಬಹುದು ಎಂಬ ಬಗ್ಗೆ ಟ್ಯುಟೋರಿಯಲ್ ( ಬೋಧನೆ ) ನೋಡಲು ಸ್ಕ್ಯಾನ್ ಮಾಡಿ : http://youtube/1w2q1hoxueo

### 2.3.2 ನೋಂದಣಿ ಕೇಂದ್ರಗಳ ಬಗೆಗಳು

ಆಧಾರ್ ನೋಂದಣಿ ಕೇಂದ್ರಗಳನ್ನು ಅವುಗಳು ಸೇವೆಗಳನ್ನೂ ತಲಪಿಸುವ ರೀತಿಯಿಂದ ದಪ್ಪನಾಗಿ ಎರಡು ವಿಧಗಳಾಗಿ ವರ್ಗೀಕರಿಸಲಾಗಿದೆ . ಅವು –

#### 2.3.2.1 ರಿಜಿಸ್ಟ್ರಾರ್ ನಿಯಂತ್ರಿತ ಆಧಾರ್ ಸೇವಾ ಕೇಂದ್ರ

ಇವು , ರಾಜ್ಯಾದ್ಯಂತ ಇರುವ ಬ್ಯಾಂಕ್ಸ್, ಅಂಚೆ ಕಛೇರಿಗಳು , ಬಿ ಎಸ್ ಏನ್ ಎಲ್ ಕೇಂದ್ರಗಳು, ಸಿ ಎಸ್ ಸಿ ಗಳು ಮತ್ತು ರಾಜ್ಯ ಸರ್ಕಾರಿ ಕಛೇರಿಗಳು ಇಲ್ಲಿ ಲಭ್ಯವಿರುವ ಆಧಾರ್ ಕೇಂದ್ರಗಳು. ಈ ಕೇಂದ್ರಗಳು ಸಂಬಂಧಿತ ನೋಂದಣಿ ರಿಜಿಸ್ಟ್ರಾರ್ ಗಳಿಂದ ನಡೆಸಲ್ಪಡುತ್ತದೆ .

**2.3.2.2 ಯು ಐ ಡಿ ಎ ಐ - ನಿಯಂತ್ರಿತ ಆಧಾರ್ ಸೇವಾ ಕೇಂದ್ರ**

ಆಧಾರ್ ಸೇವಾ ಕೇಂದ್ರಗಳು ಅಥವಾ ಎ ಎಸ್ ಕೆ ಗಳು ಯು ಐ ಡಿ ಎ ಐ ನಿಯಂತ್ರಿತ ವಿಶೇಷ ಆಧಾರ್ ಸೇವಾ ಕೇಂದ್ರಗಳಾಗಿದ್ದು ನಿವಾಸಿಗಳಿಗೆ ಅತ್ಯಾಧುನಿಕ ರೀತಿಯಲ್ಲಿ ಆಧಾರ್ ಸೇವೆಗಳನ್ನು ಒದಗಿಸುತ್ತವೆ .

ಆಧಾರ್ ಸೇವಾ ಕೇಂದ್ರದ ಹೆಚ್ಚಿನ ಮಾಹಿತಿಗಾಗಿ ಸ್ಕ್ಯಾನ್ ಮಾಡಿ

http://uidai.gov.in/ecosystem/enrolment-ecosystem/aadhaar-seva-kendra.html

ಸಾರ್ವಜನಿಕ ರಜಾ ದಿನದ ಹೊರತು ಪಡಿಸಿ ವಾರದ ಎಲ್ಲಾ ಏಳು ದಿನಗಳು ಬೆಳಿಗ್ಗೆ 9.30 ರಿಂದ 5.30 ರವರೆಗೆ ಆಧಾರ್ ಸೇವಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತವೆ . ಪ್ರತಿ ಎ ಎಸ್ ಕೆ ಗಳು ದಿನಂ ಪ್ರತಿ 250 ರಿಂದ 1000 ಸೇವಾ ಮನವಿ ಗಳನ್ನೂ ನಿಭಾಯಿಸುವ ಸಾಮರ್ಥ್ಯ ಹೊಂದಿದೆ .

## 2.4 ಆನ್ ಲೈನ್ ನಲ್ಲಿ ಸಮಯ ನಿಗದಿ ಸೇವೆ .

ಆಧಾರ್ ನೋಂದಣಿ ಗೆ ಅಥವಾ ಅಪ್ ಡೇಟ್ ಗೆ ಸಮಯ ನಿಗದಿ ಪಡಿಸುವ ಸೇವೆಯ್ ಅನ್ ಲೈನ್ ಸೌಲಭ್ಯ ವನ್ನು ಯು ಐ ಡಿ ಎ ಐ ನೀಡುತ್ತಿದೆ . ನೀವು ನಿಮಗೆ ಅಥವಾ ಕುಟುಂಬದ ಸದಸ್ಯ ಅಥವಾ ಸ್ನೇಹಿತನಿಗೆ ಸಮಯ ನಿಗದಿ ಸೇವೆಯ ಆನ್ ಲೈನ್ ಸೌಲಭ್ಯವನ್ನು ಉಪಯೋಗಿಸಬಹುದು .

**2.4.1 ಆಧಾರ್ ಸೇವೆಗಳಿಗಾಗಿ ಸಮಯ ನಿಗದಿ**

ಇದು ಹತ್ತಿರದ ಆಧಾರ್ ಸೇವಾ ಕೇಂದ್ರ ( ಎ ಎಸ್ ಕೆ ) ಅಥವಾ ಆಯ್ಕೆ ಮಾಡಿದ ಯಾವುದೇ ಆಧಾರ್ ಕೇಂದ್ರದಲ್ಲಿ ಕೆಳಗೆ ತಿಳಿಸಿರುವ ಆಧಾರ್ ಸೇವೆಗಳನ್ನು ಪಡೆಯಲು ಸಮಯ ನಿಗಧಿ ಪಡಿಸಿಕೊಳ್ಳುವ ಸೌಲಭ್ಯ.

- ಹೊಸದಾಗಿ ಆಧಾರ್ ನೋಂದಣಿ
- ಹೆಸರಿನ ಅಪ್ ಡೇಟ್
- ವಿಳಾಸದ ಅಪ್ ಡೇಟ್
- ‘ ಲಿಂಗ ‘ ದ ಅಪ್ ಡೇಟ್
- ಬಯೋಮೆಟ್ರಿಕ್ ( ಭಾವಚಿತ್ರ+ಬೆರಳಚ್ಚು+ಕಣ್ಣಿನ ವರ್ಣಪಟಲ ) ನ ಅಪ್ ಡೇಟ್
- ಮೊಬೈಲ್ ನಂಬರ್ ನ ಅಪ್ ಡೇಟ್
- ಇ- ಮೇಲ್ ಐಡಿ ಯ ಅಪ್ ಡೇಟ್

ನೀವು ಆನ್ ಲೈನ್ ನಲ್ಲಿ ಆಧಾರ್ ನೋಂದಣಿ / ಅಪ್ ಡೇಟ್ ಅರ್ಜಿ ಭರ್ತಿ ಮಾಡಿ , ಸಮಯ ನಿಗಧಿ ಕೇಂದ್ರದಿಂದ ಭೇಟಿ ಸಮಯ ಕಾಯ್ದಿರಿಸಿ , ಆಯ್ಕೆ ಮಾಡಿದ ಆಧಾರ್ ಕೇಂದ್ರಕ್ಕೆ ಭೇಟಿ ನೀಡಬೇಕಾಗುತ್ತದೆ .

ನಿಮ್ಮ ಸಮಯ ನಿಗಧಿ ಐಡಿ ಹಾಗೂ ಕ್ಯೂ ಆರ್ ಕೋಡ್ ಹೊಂದಿರುವ ಸ್ವೀಕೃತಿ ಪತ್ರ ಸಹ ನೋಂದಣಿ / ಅಪ್ ಡೇಟ್ ಅರ್ಜಿಗೆ ಸಮ . ಇದರ ಛಾಯಾ ಪ್ರತಿಯನ್ನ ಸೇವಾಕೆನ್ದ್ರಕ್ಕೆ ತೆಗೆದುಕೊಂಡು ಹೋಗುವುದರಿಂದ ಸಮಯ ಉಳಿತಾಯವಾಗುತ್ತದೆ . ಎ ಎಸ್ ಕೆ ಯಲ್ಲಿ ಮುದ್ರಣ ಸೌಲಭ್ಯ ಸಹಾ ಇರುತ್ತದೆ .

ಸಮಯ ನಿಗಧಿ ಸೇವೆಗೆ ಸ್ಕ್ಯಾನ್ ಮಾಡಿ : http://appointments.uidai.gov.in/bookappointment.aspx

ನಿಮಗಾಗೇ ಅಥವಾ ನಿಮ್ಮ ಕುಟುಂಬದ ಸದಸ್ಯರಿಗೆ ಅಥವಾ ಸ್ನೇಹಿತ ರಿಗೆ ಉಚಿತವಾಗಿ ಮುಂಗಡವಾಗಿ ಆನ್ ಲೈನ್ ನಲ್ಲಿ ಸಮಯ ನಿಗದಿ ಮಾಡಿ ಕಾಯ್ದಿರಿಸಿ ಮತ್ತು ಸಮಯ ಉಳಿಸಿ

**2.4.2 ಆನ್ ಲೈನ್ ನಲ್ಲಿ ಭೇಟಿ ಸಮಯ ನಿಗಧಿ ಮಾಡುವುದು ಹೇಗೆ ?**

ಯು ಐ ಡಿ ಎ ಐ ಅಂತರ್ಜಾಲ ಅಥವಾ ಎಂ ಆಧಾರ್ ಮೊಬೈಲ್ ಆಪ್ ಮೂಲಕ ನೀವು ಭೇಟಿ ಸಮಯವನ್ನ ನಿಗಧಿ ಮಾಡುತ್ತಿದ್ದಂತೆ ಆಧಾರ್ ಸಂಖ್ಯೆ ಹಾಗೂ ಮೊಬೈಲ್ ನಂಬರನ್ನು ದಾಖಲಿಸಬೇಕಾಗುತ್ತದೆ . ಈ ಸೌಲಭ್ಯ ಆಧಾರ್ ಗೆ ದಾಖಲೆಗೊಂಡ ಮೊಬೈಲ್ ನಂಬರ್ ಗೆ ಮಾತ್ರ ಸೀಮಿತವಾಗಿರುವುದಿಲ್ಲ .

ಆನ್ ಲೈನ್ ನಲ್ಲಿ ಮುಂಗಡವಾಗಿ ಭೇಟಿ ಸಮಯ ನಿಗಧಿ ಪಡಿಸುವ ಪ್ರಕ್ರಿಯೆ ಈ ಕೆಳಗಿನಂತೆ ಇರುತ್ತದೆ .

- ಅಂತರ್ಜಾಲ http://appointments.uidai.gov.in/bookappointment.aspx ಗೆ ಭೇಟಿ ನೀಡಿ .
- ಸೇವಾ ಕೇಂದ್ರದ ಹೆಸರನ್ನು ಆಯ್ಕೆ ಮಾಡಿ ' ಮುಂಗಡವಾಗಿ ಭೇಟಿ ಸಮಯ ನಿಗಧಿ ' ಮುಂದುವರೆಸಿ .
- ಹೊಸ ಆಧಾರ್ ಅಥವಾ ಆಧಾರ್ ಅಪ್ ಡೇಟ್ - ನಿಮಗೆ ಬೇಕಾದ ಸೇವೆಯ ಸಂಪರ್ಕ ಆಯ್ದುಕೊಳ್ಳಿ .
- ನಿಮ್ಮ ಮೊಬೈಲ್ ನಂಬರ್ ನಮೂದಿಸಿ , ಕ್ಯಾಪ್ ಚ ತಿಳಿಸಿ ಸಲ್ಲಿಸಿ .
- ನೀವು ತಿಳಿಸಿದ ಮೊಬೈಲ್ ಗೆ ಬರುವ ಓ ಟಿ ಪಿ ಯನ್ನು ನಮೂದಿಸಿ .
- ನಿಮ್ಮ ಮೊಬೈಲ್ ನ ಯಶಸ್ವೀ ದೃಡೀ ಕರಣದ ಅಗತ್ಯ ಮಾಹಿತಿ ಭರ್ತಿ ಮಾಡಿ ಅರ್ಜಿಯನ್ನು ಸಲ್ಲಿಸಿ .
- ' ಮ್ಯಾನೇಜ್ ಅಪಾಯಿಂಟ್ ಮೆಂಟ್' ಟ್ಯಾಬ್ ಗೆ ಭೇಟಿ ನೀಡಿ . ಭೇಟಿ ಸಮಯ ನಿಗಧಿ ( ಅಂದರೆ ದಿನಾಂಕ ಹಾಗೂ ವೇಳೆ ) ನಿರ್ವಹಿಸಬಹುದು .

ಟ್ಯುಟೋರಿಯಾಲ್ ವೀಕ್ಷಿಸಲು ಸ್ಕ್ಯಾನ್ ಮಾಡಿ : http://youtu.be/8ZurY3nrv7u

### 2.5.1 ಆಧಾರ್ ನೋಂದಣಿಯ ಸ್ಥಿತಿ

ನೋಂದಣಿ ಸಮಯದಲ್ಲಿ ನೀವು ಮೊಬೈಲ್ ಸಂಖ್ಯೆ / ಇ ಮೇಲ್ ಐಡಿ ನೀಡಿದ್ದರೆ , ನಿಮ್ಮ ಆಧಾರ್ ಸೃಷ್ಟಿಗೆ ಸಂಬಂಧಿಸಿದ ಎಸ್ ಎಂ ಎಸ್ / ಇ ಮೇಲ್ ಅಧಿಸೂಚನೆಗಳು ನಿಮಗೆ ಬರುತ್ತದೆ. ನಿಮ್ಮ ಆಧಾರ್ ಸೃಷ್ಟಿ ಯಾಗಿರುವ ಬಗ್ಗೆ ಯು ಐ ಡಿ ಎ ಐ ವೆಬ್ ಸೈಟ್ ನಿಂದ ಅಥವಾ ಸಹಾಯವಾಣಿ 1947 ಗೆ ಕರೆ ಮಾಡುವ ಮೂಲಕವೂ ನೀವು ಪರಿಶೀಲಿಸಿಕೊಳ್ಳಬಹುದು .

ನಿಮ್ಮ ಆಧಾರ್ ಸೃಷ್ಟಿಯ ಸ್ಥಿತಿಯನ್ನು ಪರಿಶೀಲಿಸಲು, ನಿಮಗೆ ನಿಮ್ಮ ಇ ಐ ಡಿ ( ನೋಂದಣಿ ಐ ಡಿ ) ಯ ಅವಶ್ಯಕತೆ ಇರುತ್ತೆ. ನಿಮ್ಮ ನೋಂದಣಿ ಯ ಸ್ವೀಕೃತಿ ಸ್ಲಿಪ್ ನ ಮೇಲಿನ ಎಡಭಾಗದಲ್ಲಿ 14 ಅಂಕಿಗಳ ನೋಂದಣಿ ಸಂಖ್ಯೆ ಮತ್ತು ನೋಂದಣಿ ದಿನಾಂಕ ಮತ್ತು ಸಮಯವನ್ನು ಹೊಂದಿರುವ 14 ಅಂಕಿಯ ಸಮಯದ ಅಂಚೆ ಚೀಟಿ ( ಡಿಡಿ/ಎಂಎಂ /ವೈವೈವೈಹೆಚ್ ಹೆಚ್ :ಎಂಎಂ:ಎಸ್ ಎಸ್ ) ಯನ್ನು ಹೊಂದಿರುತ್ತದೆ . ಈ 28 ಅಂಕೆಗಳು ಒಟ್ಟಾಗಿ ಸೇರಿ ನೋಂದಣಿ ಐ ಡಿ ( ಇ ಐ ಡಿ ) ಯನ್ನು ರೂಪಿಸುತ್ತದೆ .

ಇ ಐ ಡಿ ಯಲ್ಲಿ ಟ್ಯುಟೋರಿಯಲ್ ವೀಕ್ಷಿಸಲು ಸ್ಕ್ಯಾನ್ ಮಾಡಿ : https://youtu.be/H9DmEW9zBx8

#### 2.5.2 ನೋಂದಣಿ ಇ ಐ ಡಿ ಕಳೆದು ಹೋದರೆ ಏನು ಮಾಡಬೇಕು?

ನೋಂದಣಿ ಯ ನಂತರ ನಿಮಗೆ ನೀಡುವ ಸ್ವೀಕೃತಿ ಸ್ಲಿಪ್ ನಲ್ಲಿ ನೂದಣಿ ಐ ಡಿ ನಮೂದಿಸಿರುತ್ತೆ . ದಯವಿಟ್ಟು ಆ ಸ್ಲಿಪ್ ಅನ್ನು ಎಚ್ಚರಿಕೆಯಿಂದ ಇರಿಸಿಕೊಳ್ಳಿ .ನಿಮ್ಮ ದಾಖಲೆಗಳಲ್ಲಿ ಈ ಸ್ಲಿಪ್ ನ ಸ್ಪಷ್ಟ ಚಿತ್ರವನ್ನು ಉಳಿಸಿಕೊಳ್ಳಲು ನಿಮಗೊಂದು ಸಲಹೆ . ಒಂದು ವೇಳೆ , ನಿಮ್ಮ ಈ ಸ್ಲಿಪ್ ಅನ್ನು ತಪ್ಪಾಗಿ ಇರಿಸಿ ಅದು ಕಾಣೆಯಾಗಿದ್ದಾರೆ , ಈ ಕೆಳಗಿನ ಎರಡು ವಿಧಾನಗಳಿಂದ ನಿಮ್ಮ ಇ ಐ ಡಿ ಯನ್ನು ನೀವು ಹಿಂಪಡೆಯಬಹುದು.

- uidai.gov.in ( ಇದಕ್ಕೆ ಮೊಬೈಲ್ ನಂಬರ್ ಕಡ್ಡಾಯ ) ನಲ್ಲಿ ಆನ್ ಲೈನ್ ಮೂಲಕ
- ಆಧಾರ್ ಸಹಾಯವಾಣಿ 1947 ಇ ಕರೆ ಮಾಡಿ .

ಕಳೆದು ಹೋದ ಈ ಐ ಡಿ ಯನ್ನು ಹೇಗೆ ಹಿಂಪಡೆಯಬೇಕು ಎಂಬ ಬಗ್ಗೆ ಟ್ಯುಟೋರಿಯಲ್ ವೀಕ್ಷಿಸಲು ಸ್ಕ್ಯಾನ್ ಮಾಡಿ:

http://youtu.be/wn6ec60GbhA

ನಿಮ್ಮ ಇ ಐ ಡಿ ಅಥವಾ ಯು ಐ ಡಿ ( ಆಧಾರ್ ಸಂಖ್ಯೆ ) ಹಿಂಪಡೆಯಲು ಸ್ಕ್ಯಾನ್ ಮಾಡಿ: http://resident.uidai.gov.in/lost-uideid

## 3 ಆಧಾರ್ ಅಪ್‌ಡೇಟ್

ನಿಮ್ಮ ಆಧಾರ ನಲ್ಲಿನ ಯಾವುದೇ ಡೆಮೊಗ್ರಾಫಿಕ್ ವಿವರಗಳು ( ಹೆಸರು, ವಿಳಾಸ ,ಹುಟ್ಟಿದ ದಿನಾಂಕ ,ಲಿಂಗ,ಮೊಬೈಲ್ ಸಂಖ್ಯೆ ಅಥವಾ ಇ ಮೇಲ್ ಐ ಡಿ ) ಅಥವಾ ಬಯೋಮೆಟ್ರಿಕ್ ವಿವರಗಳನ್ನ ( ಭಾವಚಿತ್ರ , ಬೆರಳಚ್ಚು ,ಐರಿಸ್ ಸ್ಕ್ಯಾನ್ ) ದೇಶಾದ್ಯಂತದ ಯಾವುದೇ ಆಧಾರ್ ಕೇಂದ್ರದಿಂದ ನವೀಕರಿಸಬಹುದು .

ನೀವು ಒಂದೇ ಸಮಯದಲ್ಲಿ ಆಧಾರ್ ಕೇಂದ್ರದಲ್ಲಿ ಒಂದಕ್ಕಿಂತ ಹೆಚ್ಚು ನಮೂದುಗಳನ್ನು ನವೀಕರಿಸಬಹುದು . ಏಕ ನಮೂದು ( ವಿಳಾಸ ದಂತಹ ) ಮತ್ತು ಬಹು ನಮೂದುಗಳನ್ನು ( ವಿಳಾಸ, ಮೊಬೈಲ್ ಫೋನ್ ಸಂಖ್ಯೆ , ಇ ಮೇಲ್ ವಿಳಾಸ ಇತ್ಯಾದಿ ) ನವೀಕರಿಸಲು ಶುಲ್ಕ ಒಂದೇ ಆಗಿರುತ್ತದೆ . ಆದ್ದರಿಂದ ನವೀಕರಿಸ ಬೇಕಾದ ಎಲ್ಲಾ ನಮೂದುಗಳನ್ನು ಒಟ್ಟಿಗೆ ನವೀಕರಿಸುವುದು ನಿಮಗೆ ಅನುಕೂಲಕರ ಮತ್ತು ಮಿತವ್ಯಯಕರ . ಆದ್ದರಿಂದ ನವೀಕರಣಕ್ಕಾಗಿ ಆಧಾರ್ ಕೇಂದ್ರಕ್ಕೆ ಭೇಟಿ ನೀಡುವ ಮೊದಲು , ಅಗತ್ಯ ಇರುವ ಯಾವುದೇ ನವೀಕರಣಕ್ಕಾಗಿ ನಿಮ್ಮ ಆಧಾರ್ ವಿವರಗಳನ್ನ ಪರೀಕ್ಷಿಸಬೇಕು .

ನಿಮ್ಮ ಆಧಾರ್ ರನ್ನು ನವೀಕರಿಸಿದಾಗ , ನಿಮ್ಮ ಆಧಾರ್ ವಿವರಗಳು ಮಾತ್ರಾ ನವೀಕರಿಸಲ್ಪಡುತ್ತದೆ , ಆಧಾರ್ ಸಂಖ್ಯೆ ಒಂದೇ ಆಗಿರುತ್ತದೆ.

### 3.1 ಅಪ್‌ಡೇಟ್‌ಗೆ ಅವಶ್ಯವಿರುವ ದಾಖಲೆಗಳು

ನಿಮ್ಮ ಆಧಾರ್ ನಲ್ಲಿ ಈ ಕೆಳಗಿನ ವಿವರಗಳನ್ನು ಅಪ್ ಡೇಟ್ ಮಾಡುವಾಗ ಪರಿಶೀಲನೆಗಾಗಿ ನೀವು ಮಾನ್ಯ ಪೋಷಕ ದಾಖಲೆಗಳನ್ನು ಸಲ್ಲಿಸಬೇಕಾಗಿದೆ .

- ಹೆಸರು
- ವಿಳಾಸ
- ಹುಟ್ಟಿದ ದಿನಾಂಕ

ದಾಖಲೆಗಳು ಅರ್ಜೀದಾರರ ಹೆಸರಿನಲ್ಲಿರಬೇಕು .ಸ್ವಿಕಾರರ್ಹ ದಾಖಲೆಗಳ ಪಟ್ಟಿ ಆಧಾರ್ ವೆಬ್ ಸೈಟ್ ಮತ್ತು ಎಂ ಆಧಾರ್ ವೆಬ್ ಸೈಟ್ ನಲ್ಲಿ ಲಭ್ಯವಿದೆ . ( ವಿಭಾಗ 13.1 , ಅನೆಕ್ಸ್ 1 ನೋಡಿ )

ಕೆಳಗಿನ ವಿವರಗಳನ್ನು ನವೀಕರಿಸಲು ಯಾವುದೇ ದಾಖಲೆಯ ಅಗತ್ಯವಿಲ್ಲ .

- ಲಿಂಗ
- ಮೊಬೈಲ್ ನಂಬರ್
- ಇ ಮೇಲ್ ಐ ಡಿ
- ಭಾವಚಿತ್ರ
- ಬೆರಳಚ್ಚು ಮತ್ತು ಐರಿಸ್ ಸ್ಕ್ಯಾನ್

- ಸ್ಥಳೀಯ ಭಾಷೆ

ಗಮನಿಸಿ : ಆಧಾರ್ ನಲ್ಲಿ ತಂದೆಯ ; ತಾಯಿಯ ; ಗಂಡನ ಹೆಸರು , ವಿಳಾಸ ಮಾಹಿತಿಯ ಒಂದು ಭಾಗವಾಗಿದೆ . ಆಧಾರ್ ಹೊಂದಿರುವವರು ಇದನ್ನು ಯಾವಾಗ ಬೇಕಾದರೂ ನವೀಕರಿಸಬಹುದು . ವಿವರಗಳಿಗಾಗಿ ವಿಭಾಗ 3.4 ಅನ್ನು ನೋಡಿ .

### 3.2 ಆನ್ ಲೈನ್ ನಲ್ಲಿ ವಿಳಾಸ ಅಪ್‌ಡೇಟ್‌ಸೌಲಭ್ಯ

ಸ್ವಯಂ ಸೇವೇ ಮತ್ತು ನವೀಕರಣ ಪೋರ್ಟಲ್ ಅಂದರೆ ( ಎಸ್ ಎಸ್ ಯು ಪಿ ) http://ssup.uidai.gov.in/ssup/ ನಿಂದ ಆನ್ ಲೈನ್ ನಲ್ಲಿ ವಿಳಾಸವನ್ನು ನವೀಕರಿಸುವ ಸೌಲಭ್ಯವನ್ನೂ ಯು ಐ ಡಿ ಎ ಐ ನೀಡುತ್ತದೆ . ಎಸ್ ಎಸ್ ಯು ಪಿ ಗೆ ಲಾಗ್ ಇನ್ ಆಗಲು ಓ ಟಿ ಪಿ ಪಡೆಯಲು ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಯನ್ನು ನೀವು ಹೊಂದಿರಬೇಕು . ನೋಂದಾಯಿತ ಮೊಬೈಲ್ ಸಂಖ್ಯೆ ಲಭ್ಯವಿಲ್ಲದಿದ್ದರೆ ನವೀಕರಣ ವಿನಂತಿಯನ್ನು ಇರಿಸಲು ನಿಮ್ಮ ಆಧಾರ್ ಮತ್ತು ಪೋಷಕ ದಾಖಲೆಯೊಂದಿಗೆ ನೀವು ಯಾವುದೇ ಆಧಾರ್ ಕೇಂದ್ರಕ್ಕೆ ಭೇಟಿ ನೀಡಬಹುದು.

### 3.2.1 ಆನ್ ಲೈನ್ ನಲ್ಲಿ ವಿಳಾಸ ಅಪ್‌ಡೇಟ್ – ದಾಖಲೆಗಳಿದ್ದಾಗ

ಆನ್ಲೈನ್ ನಲ್ಲಿ ಡೆಮೊಗ್ರಾಫಿಕ್ ವಿವರಗಳನ್ನು ನವೀಕರಿಸಲು - ದಾಖಲೆಗಳೊಂದಿಗೆ

ನಿಮ್ಮ ಡೆಮೊಗ್ರಾಫಿಕ್ (ಹೆಸರು (ಸಣ್ಣ ನವೀಕರಣ), ವಿಳಾಸ, ಡಿಒಬಿ(ಜನ್ಮ ದಿನಾಂಕ), ಲಿಂಗ, ಸ್ಥಳೀಯ ಭಾಷೆ) ವಿವರಗಳ ವಿನಂತಿಯನ್ನು ನೀಡಬಹುದು, ನಿಮ್ಮ ಹೆಸರಿನಲ್ಲಿ ಮಾನ್ಯ ವಿಳಾಸದ ಪುರಾವೆಗಳೊಂದಿಗೆ ನಿಮ್ಮ ಆಧಾರ್‌ನಲ್ಲಿ ವಿಳಾಸವನ್ನು ನವೀಕರಿಸಲು ನೀವು ವಿನಂತಿಯನ್ನು ನೀಡಬಹುದು (ವಿಭಾಗ 13.1, ಅನೆಕ್ಸ್ - I ನಲ್ಲಿನ ಪಟ್ಟಿಯನ್ನು ನೋಡಿ). ಆನ್‌ಲೈನ್ ವಿಳಾಸ ನವೀಕರಣದ ಪ್ರಕ್ರಿಯೆ ಹೀಗಿದೆ:

1. ಎಸ್ ಎಸ್ ಯು ಪಿ ಗೆ ಭೇಟಿ ನೀಡಿ - https://ssup.uidai.gov.in/ssup/
2. ನಿಮ್ಮ ಆಧಾರ್ ಸಂಖ್ಯೆಯೊಂದಿಗೆ ಲಾಗಿನ್ ಮಾಡಿ
3. ನಿಮ್ಮ ಮೊಬೈಲ್‌ನಲ್ಲಿ ಸ್ವೀಕರಿಸಿದ ಒಟಿಪಿ ನಮೂದಿಸಿ
4. ಹೊಸ ವಿಳಾಸವನ್ನು ನಮೂದಿಸಿ
5. ನಿಮ್ಮ ಆಧಾರ್‌ನಲ್ಲಿ ಸ್ಥಳೀಯ ಭಾಷೆಗೆ ಅನುವಾದ ಮಾಡಲು ಯುಐಡಿಎಐಗೆ ಅನುಮತಿಸಿ ಅಥವಾ ಸ್ವಯಂ-ಅನುವಾದಿತ ಪಠ್ಯದಿಂದ ಕಾಗುಣಿತಗಳನ್ನು ನೀವೇ ಸರಿಪಡಿಸಿ
6. ಎಲ್ಲಾ ವಿವರಗಳು ಮತ್ತು ಕಾಗುಣಿತಗಳೊಂದಿಗೆ ನೀವು ತೃಪ್ತಿ ಹೊಂದಿದ ನಂತರ, ಸಲ್ಲಿಸಿ

7. ಅಪ್ ಲೋಡ್ ಮಡುವಾ ಸಪ್ಪೋರಿಂಗ್ (ಪೋಷಕ) ದಾಖಲೆಗಳು ಸ್ಪಷ್ಟವಾಗಿರಬೇಕು (ಫೈಲ್ ಫಾರ್ಮ್ಯಾಟ್ pdf, png, ಅಥವಾ jpeg ಸ್ವರೂಪದಲ್ಲಿ) ನಿಮ್ಮ ವಿನಂತಿಯೊಂದಿಗೆ ಅಪ್ ಲೋಡ್ ಮಡಿ. ಬಹು ಪುಟಗಳನ್ನು ಎಲ್ಲಾ ದಾಖಲೆಗಳನ್ನು ಒಂದು ಪಿಡಿಎಫ್ (PDF) ಪರಿವರ್ತಿಸಿ ಅಪ್‌ಲೋಡ್ ಮಾಡಿ.

8. ಅಪ್‌ಲೋಡ್ ಮಾಡಲು ಮೂಲ ದಾಖಲೆಯನ್ನು ಸ್ಕ್ಯಾನ್ ಮಾಡಲು ಸೂಚಿಸಲಾಗಿದೆ. ಮೂಲ ದಾಖಲೆ ಲಭ್ಯವಿಲ್ಲದಿದ್ದರೆ, ಮೂಲ ದಾಖಲೆಗಳ ಪ್ರತಿಅನ್ನು ನೋಟರಿ / ದೃಢೀಕರಿಸಿದ ಪ್ರತಿಅನ್ನು ನೋಟರಿ ಪಬ್ಲಿಕ್ ಅಥವಾ ಗೆಜೆಟೆಡ್ ಅಧಿಕಾರಿಗಳ ಸಹಿ ಮತ್ತು ಮೊಹರು ಮಾಡಿರುವ ದಾಖಲೆಯನ್ನು ಅಪ್‌ಲೋಡ್ ಮಾಡಬೇಕು

9. ವಿವರಗಳು ಮತ್ತು ಕಾಗುಣಿತಗಳನ್ನು ಮತ್ತು ಪೂರಕ ದಾಖಲೆಯನ್ನು ಪರಿಶೀಲಿಸುವುದು ಉತ್ತಮ, ತಿದ್ದುಪಡಿ/ಬದಲಾವಣೆಗಳಿಗಾಗಿ ಸಂಪಾದನೆ (ತಿದ್ದು) ಆಯ್ಕೆಯನ್ನು ಬಳಸಿ.

10. ದಯವಿಟ್ಟು ಪಾವತಿ ಮಾಡಿ ಬಟನ್ ಕ್ಲಿಕ್ ಮಾಡಿ ಮತ್ತು ಪಾವತಿಯನ್ನು ಪ್ರಕ್ರಿಯೆಗೊಳಿಸಿ

11. ಎಸ್ ಎಸ್ ಯು ಪಿಗೆ ಶುಲ್ಕ ರೂ.50/- ಆಗಿದೆ, ಒಂದಕ್ಕಿಂತ ಹೆಚ್ಚು ಮಾಹಿತಿಗಳ ತಿದ್ದುಪಡಿಯನ್ನು ಒಂದು ಎಂದು ಪರಿಗಣಿಸಿ ರೂ.50/- ಅಷ್ಟೇ ವಿಧಿಸಲಾಗುತ್ತದೆ

12. ಬಿಪಿಒ ಸಂಸ್ಕರಣೆಗೆ ಮೊದಲು ನಿವಾಸಿ ನವೀಕರಣ ವಿನಂತಿಯನ್ನು ರದ್ದುಗೊಳಿಸಬಹುದು (ರದ್ದತಿಯ ಮೇಲೆ ಅಥವಾ ಪಾವತಿಸಿದರೆ ಪಾವತಿ ವೈಫಲ್ಯದ ಮೊತ್ತವನ್ನು ನಿವಾಸಿಗೆ ಮರುಪಾವತಿ ಮಾಡಬೇಕು)

13. ನೀವು ಹಿಂದಿನ ವಿನಂತಿಯನ್ನು ವಿಫಲಗೊಳಿಸಿದ್ದರೆ (ಪಾವತಿ ವೈಫಲ್ಯದ ಕಾರಣ), ಎಸ್ ಎಸ್ ಯುಪಿ(SSUP) ಪೋರ್ಟಲ್‌ಗೆ ಲಾಗ್-ಇನ್ ಮಾಡಿದ ನಂತರ ನೀವು ಆ ವಿನಂತಿಯನ್ನು ರದ್ದುಗೊಳಿಸಬಹುದು.

ಭವಿಷ್ಯದ ಉಲ್ಲೇಖಕ್ಕಾಗಿ ಯುಆರ್ಎನ್ (ನವೀಕರಣ ವಿನಂತಿ ಸಂಖ್ಯೆ) ಅನ್ನು ಗಮನಿಸಿ / ಉಳಿಸಿ

ಆನ್‌ಲೈನ್ ವಿಳಾಸ ನವೀಕರಣದ ಟ್ಯುಟೋರಿಯಲ್ ನೋಡಲು ಸ್ಕ್ಯಾನ್ ಮಾಡಿ - https://youtu.be/u7QFDiVyWbM

ಸ್ವೀಕಾರಾರ್ಹ ದಾಖಲೆಗಳ ಪಟ್ಟಿಯನ್ನು ಉಲ್ಲೇಖಿಸಲು ಸ್ಕ್ಯಾನ್ ಮಾಡಿ -

https://uidai.gov.in/images/commdoc/valid_documents_list.pdf

### 3.2.2 ಎಸ್ ಎಸ್ ಯು ಪಿ ಮೂಲಕ ಸಲ್ಲಿಸಲಾದ ವಿನಂತಿಯನ್ನು ತಿರಸ್ಕರಿಸುವುದನ್ನು ತಪ್ಪಿಸಲು - ಚೆಕ್ ಪಾಯಿಂಟ್ ಗಳು

- ದಯವಿಟ್ಟು ಆನ್ ಲೈನ್ ಎಸ್ ಎಸ್ ಯುಪಿ ಫಾರ್ಮ್ನಲ್ಲಿ ಮಾನ್ಯ ಡೇಟಾ ನಮೂದಿಸಿ; ಅಪ್ ಡೇಟ್ ವಿನಂತಿಯಲ್ಲಿ ಅಪ್ ಲೋಡ್ ಮಾಡಿದ ದಾಖಲೆಗಳೊಂದಿಗೆ ನಮೂದಿಸಲಾದ ವಿವರಗಳು ಹೋಲುತ್ತಿದೆ ಎಂದು ಖಚಿತಪಡಿಸಿಕೊಳ್ಳಿ.
- ಅಪ್‌ಲೋಡ್ ಮಾಡಿದ ದಾಖಲೆಯಲ್ಲಿ ನವೀಕರಣ ವಿನಂತಿಯನ್ನು ಮಾಡಿದ ನಿವಾಸಿ ಹೆಸರು ಇದೆ ಎಂದು ಖಚಿತಪಡಿಸಿಕೊಳ್ಳಿ
- ಅಪ್ಲೋಡ್ ಮಾಡಲಾದ ದಾಖಲೆಯ ಹೆಸರನ್ನು ಸರಿಯಾಗಿ ಆಯ್ಕೆಮಾಡಿ; ಮತ್ತು ಅದು ಪೂರಕ ದಾಖಲೆಯೊಂದಿಗೆ ಅದು ಹೋಲುತ್ತಿತೆ ಎಂದು ಖಚಿತಪಡಿಸಿಕೊಳ್ಳಿ
- ಮಾನ್ಯ ದಾಖಲೆಗಳನ್ನು ಅಪ್ಲೋಡ್ ಮಾಡುವಾಗ ಮೂಲ ದಾಖಲೆಗಳ ಹೆಚ್ಚಿನ ರೆಸಲ್ಯೂಶನ್ ಚಿತ್ರಗಳನ್ನು ಬಳಸಿ

- ಡಾಕ್ಯುಮೆಂಟ್‌ನಲ್ಲಿ ಉಲ್ಲೇಖಿಸಲಾದ ವಯಸ್ಸು ಮತ್ತು ಆಧಾರ್‌ನಲ್ಲಿನ ಫೋಟೋ ಹೊಂದಿಕೆಯಾಗಬೇಕು
- ನಿವಾಸಿ ಮತ್ತು ಫೋಟೋ ಲಿಂಗವು ಹೊಂದಾಣಿಕೆ ಆಗಿರಬೇಕು
- ಅಪೂರ್ಣ ವಿವರಗಳೊಂದಿಗೆ ದಯವಿಟ್ಟು ವಿನಂತಿಯನ್ನು ಸಲ್ಲಿಸಬೇಡಿ

### 3.3 ಮಕ್ಕಳಿಗೆ ಕಡ್ಡಾಯ ಬಯೋ ಮೆಟ್ರಿಕ್ ಅಪ್ ಡೇಟ್

ಮಗುವಿಗೆ 5 ವರ್ಷ ದಾಟಿದಾಗ ಮತ್ತು ಮತ್ತೊಮ್ಮೆ 15 ವರ್ಷ ವಯಸ್ಸಿನಲ್ಲಿ ಮಕ್ಕಳ ಬಯೋಮೆಟ್ರಿಕ್ ವಿವರಗಳನ್ನು ಅವರ ಆಧಾರ್‌ನಲ್ಲಿ ನವೀಕರಿಸಬೇಕಾಗುತ್ತದೆ. ಮಗುವಿನ ಬೆರಳಚ್ಚುಗಳು, ಐರಿಸ್ ಸ್ಕ್ಯಾನ್‌ಗಳು ಮತ್ತು ಛಾಯಾಚಿತ್ರಗಳನ್ನು ಅವರ ಆಧಾರ್ ಡೇಟಾದಲ್ಲಿ ಸೆರೆಹಿಡಿಯಲಾಗುತ್ತದೆ ಮತ್ತು ನವೀಕರಿಸಲಾಗುತ್ತದೆ. ಇದು ಮಗುವಿಗೆ ಅವನ / ಅವಳ ಆಧಾರ್ ಅನ್ನು ಅಗತ್ಯವಿರುವ ಕಡೆ ಗುರುತಿಸುವಿಕೆಯಾಗಿ ಬಳಸಲು ಸಹಾಯ ಮಾಡುತ್ತದೆ. ಮಗುವಿಗೆ ನಿಗದಿಪಡಿಸಿದ ಆಧಾರ್ ಸಂಖ್ಯೆ ಒಂದೇ ಆಗಿರುತ್ತದೆ. ಮಕ್ಕಳಿಗೆ ಈ ಕಡ್ಡಾಯ ಬಯೋಮೆಟ್ರಿಕ್ ನವೀಕರಣ ಉಚಿತವಾಗಿದೆ.

### 3.4 ಆಧಾರ್ ನಲ್ಲಿ  ಕೇರ್ ಆಫ್ ವಿಳಾಸದ ಅಪ್‌ಡೇಟ್

ಆಧಾರ್‌ನಲ್ಲಿನ  ಕೇರ್ ಆಫ್ ವಿವರಗಳು ವಿಳಾಸ  ಮಾಹಿತಿಯ ಒಂದು ಭಾಗವಾಗಿದೆ. ಇವುಗಳನ್ನು ಮೊದಲು W / o, D / o, S / o ಅಥವಾ C / o ಎಂದು ಉಲ್ಲೇಖಿಸಲಾಗುತ್ತಿದ್ದು  ಈಗ  ಇವುಗಳನ್ನು  ಕೇರ್ ಆಫ್ ಗೆ  ಪ್ರಮಾಣೀಕರಿಸಲಾಗಿದೆ. ನಿಮ್ಮ ಆಧಾರ್ ಅನ್ನು ನೀವು ನವೀಕರಿಸಿದರೆ ಅಥವಾ ಇತ್ತೀಚಿನ ಆಧಾರ್ ಅನ್ನು ಡೌನ್‌ಲೋಡ್ ಮಾಡಿದರೆ, ಅದು ಸಂಬಂಧದ ವಿವರಗಳನ್ನು ಸಿ / ಒ ಎಂದು ತೋರಿಸುತ್ತದೆ.
ನೀವು ಇದನ್ನು ನವೀಕರಿಸಲು ಬಯಸಿದರೆ, ವಿಳಾಸ ನವೀಕರಣ ವಿನಂತಿಯನ್ನ ಮಾಡಬಹುದು  (ಆಧಾರ್ ಕೇಂದ್ರದಿಂದ ಅಥವಾ ಆನ್‌ಲೈನ್‌ನಲ್ಲಿ ಎಸ್‌ಎಸ್‌ಯುಪಿ ಮೂಲಕ - ಸೆಕ್ಷನ್ . 3.2.1).

ದಾಖಲೆ  ನಿಮ್ಮ ಹೆಸರಿನಲ್ಲಿರಬೇಕು ಮತ್ತು  ದಾಖಲೆ ಕೇರ್ ಆಫ್ -ಸಿ / ಒ  ಕ್ಷೇತ್ರದಲ್ಲಿ ನೀವು ನವೀಕರಿಸಲು ಬಯಸುವ ವ್ಯಕ್ತಿಯ ಹೆಸರನ್ನು ಹೊಂದಿರುವ ಅಗತ್ಯವಿಲ್ಲ. ಕೇರ್ ಆಫ್  ಇದು ಕಡ್ಡಾಯ ಮಾಹಿತಿಯಲ್ಲ . ನಿಮ್ಮ ವಿಳಾಸದಲ್ಲಿ  ಕೇರ್ ಆಫ್  ಸಿ / ಒ ಕ್ಷೇತ್ರವನ್ನು ಖಾಲಿ ಬಿಡಲು ನೀವು ಆಯ್ಕೆ ಮಾಡಬಹುದು.
ಬಾಕ್ಸ್ ಸಂದೇಶ:  ಕೇರ್ ಆಫ್ , ಸಿ / ಒ ಕ್ಷೇತ್ರವು ಕಡ್ಡಾಯ ಕ್ಷೇತ್ರವಲ್ಲ. ನಿಮ್ಮ ವಿಳಾಸದಲ್ಲಿ  ಕೇರ್ ಆಫ್ , ಸಿ / ಒ ಕ್ಷೇತ್ರವನ್ನು ಖಾಲಿ ಬಿಡಲು ನೀವು ಆಯ್ಕೆ ಮಾಡಬಹುದು.

### 3.5 ಅಪ್‌ಡೇಟ್‌ನ ಬಹು ಬಾರಿ ಬಳಕೆಯಲ್ಲಿನ  ಮಿತಿ

ಯುಐಡಿಎಐನ ನವೀಕರಣ ನೀತಿಯ ಪ್ರಕಾರ, ಅವರ ಆಧಾರ್ ನಲ್ಲಿನ ಸಾಮಾಜಿಕ  ಮಾಹಿತಿಯ ನವೀಕರಣಕ್ಕಾಗಿ ಈ ಕೆಳಗಿನ ಮಿತಿಗಳನ್ನು ನಿಗದಿಪಡಿಸಲಾಗಿದೆ.

- ಹೆಸರು - ಎರಡು ಬಾರಿ ನವೀಕರಿಸಬಹುದು
- ಲಿಂಗ - ಒಮ್ಮೆ
- ಹುಟ್ಟಿದ ದಿನಾಂಕ - ಒಮ್ಮೆ

ಮೇಲಿನ ನವೀಕರಣಗಳ ಪ್ರಕ್ರಿಯೆಯು ಮೇಲಿನ ವಿಭಾಗ 3.1 ರಲ್ಲಿ ವಿವರಿಸಿದಂತೆ ಅನುಮತಿಸಲಾದ ಮಿತಿಗಳಲ್ಲಿ ಇರುತ್ತದೆ. ನಿಮ್ಮ ಆಧಾರ್‌ನಲ್ಲಿನ ಇತರ ಯಾವುದೇ ಮಾಹಿತಿಯನ್ನು ಅಗತ್ಯವಿದ್ದಾಗ ನವೀಕರಿಸಬಹುದು. ಯಾವುದೇ ಸಾಮಾಜಿಕ  ಮಾಹಿತಿಗಳ ವಿಳಾಸ, ಇಮೇಲ್ ಐಡಿ, ಮೊಬೈಲ್ ಸಂಖ್ಯೆ; ಅಥವಾ ಬಯೋಮೆಟ್ರಿಕ್ಸ್ - ಛಾಯಾಚಿತ್ರ , ಬೆರಳಚ್ಚುಗಳು, ಐರಿಸ್ ಸ್ಕ್ಯಾನ್ ಗಳ ಮರು ನವೀಕರಣಗಳ ಸಂಖ್ಯೆಗೆ ಯಾವುದೇ ಮಿತಿಯಿಲ್ಲ.

### 3.6 ಆಧಾರ್ ಅಪ್‌ಡೇಟ್ ಗೆ ಅಸಾಧಾರಣ ವಿನಾಯಿತಿ ಪ್ರಕ್ರಿಯೆ

ಯಾವುದೇ ಕಾರಣಕ್ಕಾಗಿ, ನಿಮ್ಮ ಆಧಾರ್‌ನಲ್ಲಿ ಮೇಲಿನ ಮೂರು ಕ್ಷೇತ್ರಗಳನ್ನು (ಹೆಸರು, ಲಿಂಗ ಮತ್ತು ಹುಟ್ಟಿದ ದಿನಾಂಕ) ಮತ್ತೆ ನವೀಕರಿಸಬೇಕಾದರೆ (ಅನುಮತಿಸುವ ಮಿತಿಯನ್ನು ಮೀರಿ), ನೀವು ಇದನ್ನು ಮಾಡಬೇಕಾಗಿದೆ:

1. ಯಾವುದೇ ಆಧಾರ್ ಸೇವಾ ಕೇಂದ್ರಕ್ಕೆ ಭೇಟಿ ನೀಡಿ (ಹೆಸರು ಮತ್ತು ಜನ್ಮ ನವೀಕರಣದ ದಿನಾಂಕಕ್ಕಾಗಿ ಮಾನ್ಯ ಪೋಷಕ ದಾಖಲೆಯೊಂದಿಗೆ)
2. ನವೀಕರಣ ವಿನಂತಿಯನ್ನು ಮಾಡಿ
3. 1947 ಗೆ ಕರೆ ಮಾಡುವ ಮೂಲಕ ಅಥವಾ help@uidai.gov.in ಗೆ ಇಮೇಲ್ ಮೂಲಕ ಇತ್ತೀಚಿನ ಯುಆರ್ ಎನ್  (ನವೀಕರಣ ವಿನಂತಿ ಸಂಖ್ಯೆ) ಅನ್ನು ಆಧಾರ್ ಸಹಾಯ ಕೇಂದ್ರಕ್ಕೆ ಕಳುಹಿಸಿ ಮತ್ತು 'ಎಕ್ಸೆಪ್ಶನ್ ಅಪ್‌ಡೇಟ್‌ಗಾಗಿ' ವಿನಂತಿಸಿ

ಈ ಪ್ರಕರಣವನ್ನು ಯುಐಡಿಎಐನ ಪ್ರಾದೇಶಿಕ ಕಚೇರಿಗೆ ನಿಯೋಜಿಸಲಾಗುತ್ತದೆ, ಅದು ನಿಮ್ಮ ವಿನಂತಿಯನ್ನು ಮುತುವರ್ಜಿ ವಹಿಸಿ ಪರಿಶೀಲಿಸಿದ ನಂತರ, ನಿಮ್ಮ ನವೀಕರಣ ವಿನಂತಿಯನ್ನು ಪ್ರಕ್ರಿಯೆಗೊಳಿಸಲಾಗುತ್ತದೆ ಮತ್ತು ಅದರ ಫಲಿತಾಂಶ ನಿಮಗೆ ತಿಳಿಸಲಾಗುತ್ತದೆ .

### 3.7 ಅಮಾನತುಗೊಂಡ ಆಧಾರ್ ನ ಅಪ್‌ಡೇಟ್

ನಿಮ್ಮ ಆಧಾರ್ ಡೇಟಾ ಆವರ್ತಕ ಗುಣಮಟ್ಟದ ತಪಾಸಣೆಗೆ ಒಳಪಟ್ಟಿರುತ್ತದೆ. ಯುಐಡಿಎಐನ ಅಂತಹ ಗುಣಮಟ್ಟದ ತಪಾಸಣೆಯ ಸಮಯದಲ್ಲಿ, ಪೋಷಕರ ದಾಖಲೆಗಳಲ್ಲಿ ಅಥವಾ ನಿವಾಸಿಗಳ ಸೆರೆಹಿಡಿದ  ಬಯೋಮೆಟ್ರಿಕ್ ಡೇಟಾಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ  ಅವನ / ಅವಳ ಆಧಾರ್ ಅನ್ನು ತಾತ್ಕಾಲಿಕವಾಗಿ ಅಮಾನತುಗೊಳಿಸಲಾಗುತ್ತದೆ ಮತ್ತು ಆಧಾರ್ ಹೊಂದಿರುವವರಿಗೆ

ಈ ಬಗ್ಗೆ ಸರಿಯಾದ ಸೂಚನೆ ನೀಡಲಾಗುತ್ತದೆ. ನಿಮ್ಮ ಆಧಾರ್ ಅಮಾನತುಗೊಂಡರೆ, ನೀವು ಆಧಾರ್ ಒಟಿಪಿ / ಬಯೋಮೆಟ್ರಿಕ್ ದೃಡೀಕರಣದ ಆಧಾರದ ಮೇಲೆ ಯಾವುದೇ ಸೇವೆಯನ್ನು ಪಡೆಯಲು ಸಾಧ್ಯವಾಗುವುದಿಲ್ಲ.

ಅಂತಹ ಸಂದರ್ಭದಲ್ಲಿ, ನೀವು ಈ ಹಂತಗಳನ್ನು ಅನುಸರಿಸಬೇಕು:

1. 'ಆಧಾರ್ ಅಮಾನತು' ಮತ್ತು ನಂತರದ ಕ್ರಮಗಳ ಕಾರಣವನ್ನು ತಿಳಿಯಲು ಯುಐಡಿಎಐ ಇಮೇಲ್ / ಎಸ್ಎಂಎಸ್ / ಪತ್ರವನ್ನು ನೋಡಿ ಅಥವಾ ನಂತರದ ಕ್ರಮವನ್ನು ತಿಳಿಯಲು 1947 ಕ್ಕೆ ಕರೆ ಮಾಡಿ.
2. ಅಮಾನತು ಬಯೋಮೆಟ್ರಿಕ್ಸ್ ಸಂಬಂಧಿತ ಕಾರಣದಿಂದಾಗಿ, ಯಾವುದೇ ಆಧಾರ್ ಸೇವಾ ಕೇಂದ್ರಕ್ಕೆ ಭೇಟಿ ನೀಡಿ ಮತ್ತು ನಿಮ್ಮ ಬಯೋಮೆಟ್ರಿಕ್ಸ್ ಅನ್ನು ನವೀಕರಿಸಿ.
3. ಅಮಾನತು ದಾಖಲೆಗಳಿಗೆ ಸಂಬಂಧಿಸಿದ ಕಾರಣದಿಂದಾಗಿ, ಸರಿಯಾದ ಪರಿಶ್ರಮದ ನಂತರ ನವೀಕರಣಕ್ಕಾಗಿ ಸಂಬಂಧಪಟ್ಟ ಆಧಾರ್ ಪ್ರಾದೇಶಿಕ ಕಚೇರಿಯನ್ನು ಸಂಪರ್ಕಿಸಿ / ಭೇಟಿ ಮಾಡಿ.

### 3.8 ಅಪ್‌ಡೇಟ್ ಘಟ್ಟದ ಪರಿಶೀಲನೆ

ನಿಮ್ಮ ಆಧಾರ್ ನವೀಕರಣ ವಿನಂತಿಯ ಸ್ಥಿತಿಯನ್ನು ಪರಿಶೀಲಿಸಲು ನವೀಕರಣ ಸ್ವೀಕೃತಿ ಸ್ಲಿಪ್‌ನಲ್ಲಿ ಉಲ್ಲೇಖಿಸಲಾದ 14 ಅಂಕಿಗಳ ನವೀಕರಣ ವಿನಂತಿ ಸಂಖ್ಯೆ (ಯುಆರ್ಎನ್) ಮತ್ತು ದಿನಾಂಕ ಮತ್ತು ಸಮಯ ಸ್ಟ್ಯಾಂಪ್ ಅನ್ನು ನೀವು ಬಳಸಬಹುದು:

- ಆಧಾರ್ ಸಹಾಯವಾಣಿ – 1947
- ಮೇಲ್ ಐಡಿ - help@uidai.gov.in
- ಆಧಾರ್ ವೆಬ್‌ಸೈಟ್ ಐಡಿ – uidai.gov.in
- ಎಂ ಆಧಾರ್ ಮೊಬೈಲ್ ಅಪ್ಲಿಕೇಶನ್

SSUP ಮೂಲಕ ಆನ್‌ಲೈನ್ ವಿಳಾಸ ನವೀಕರಣ ವಿನಂತಿಯನ್ನು ಯಶಸ್ವಿಯಾಗಿ ಸಲ್ಲಿಸಿದ ಮೇಲೆ , ನೀವು URN (ನವೀಕರಣ ವಿನಂತಿ ಸಂಖ್ಯೆ) ಅನ್ನು ಸ್ವೀಕರಿಸುತ್ತೀರಿ. ಇದನ್ನು ಪರದೆಯ ಮೇಲೆ ತೋರಿಸಲಾಗುತ್ತದೆ ಮತ್ತು ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಗೆ SMS ಮೂಲಕವೂ ಕಳುಹಿಸಲಾಗುತ್ತದೆ. ನಿಮ್ಮ ಆಧಾರ್ ನವೀಕರಣದ ಸ್ಥಿತಿಯನ್ನು ಪತ್ತೆಹಚ್ಚಲು ಈ ಯುಆರ್ ಎನ್  ಮತ್ತು ನಿಮ್ಮ ಆಧಾರ್ ಸಂಖ್ಯೆಯನ್ನು ಬಳಸಿ: https://ssup.uidai.gov.in/checkSSUPStatus/checkupdatestatus

### 3.9 ಆಧಾರ್ ಅಪ್‌ಡೇಟ್ ಗೆ ನೆನಪಿಡಬೇಕಾದ ಅಂಶಗಳು ಆಧಾರ್ ಸೇವಾ ಕೇಂದ್ರ

1. ಯಾವುದೇ ಆಧಾರ್ ಹೊಂದಿರುವವರು ಆಧಾರ್ ಗಾಗಿ ವಿನಂತಿಸಬಹುದು, ನವೀಕರಿಸಬಹುದು
2. ಆಧಾರ್ ಹೊಂದಿರುವವರು ಮಾತ್ರ ಅವನ / ಅವಳ ಆಧಾರ್‌ನಲ್ಲಿ ನವೀಕರಣಕ್ಕಾಗಿ ವಿನಂತಿಸಬಹುದು. ಆಧಾರ್-ಹೋಲ್ಡರ್ ಪರವಾಗಿ ಯಾರೂ ನವೀಕರಣ ವಿನಂತಿಯನ್ನು ನೀಡಲು ಸಾಧ್ಯವಿಲ್ಲ (5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಹೊರತುಪಡಿಸಿ).
3. 18 ವರ್ಷಕ್ಕಿಂತ ಕಡಿಮೆ ವಯಸ್ಸಿನವ ಮಕ್ಕಳ ಆಧಾರ್ ಉಪ್ಡೇಟೆಗಾಗಿ ಪೋಷಕರು /ಪಾಲಕರ ಸಮ್ಮತಿಯನ್ನು ಸೇವೆಕರಿಸಲಾಗುತದೆ

4. ಆಧಾರ್ ನವೀಕರಣ ವಿನಂತಿಯನ್ನು ಆಧಾರ್ ಹೊಂದಿರುವವರು ದೃಢೀಕರಿಸುವ ಅಗತ್ಯವಿದೆ . ಈ ದೃಢೀಕರಣವನ್ನು ಆಧಾರ್ ಕೇಂದ್ರದಲ್ಲಿ ಬಯೋಮೆಟ್ರಿಕ್ ದೃಢೀಕರಣ ಅಥವಾ ಆನ್‌ಲೈನ್ ವಿಳಾಸ ನವೀಕರಣದ ಒಟಿಪಿ ದೃಢೀಕರಣವಾಗಿ ಮಾಡಲಾಗುತ್ತದೆ. 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ, ಈ ದೃಢೀಕರಣವನ್ನ ಮಗುವಿನ ಆಧಾರ್ ನೋಂದಣಿ ಸಂದರ್ಭದಲ್ಲಿ ಜೋಡಿಸಿರುವ ಆಧಾರ್ ಸಂಖ್ಯೆ ಮೂಲಕ ಪೋಷಕರು / ಪಾಲಕರು ಮಾಡುತ್ತಾರೆ .
5. ನಿಮ್ಮ ನವೀಕರಣ ಸ್ಲಿಪ್ ಅನ್ನು ನೀವು ಕಳೆದುಕೊಂಡರೆ ಅಥವಾ ನಿಮ್ಮ ನವೀಕರಣ ವಿನಂತಿ ಸಂಖ್ಯೆಯನ್ನು ನೀವು ಹೊಂದಿಲ್ಲದಿದ್ದರೆ, ಸೆಕ್ಷನ್ 2.5.1 ರಲ್ಲಿ ವಿವರಿಸಿರುವಂತೆ ಇ ಐ ಡಿ ಯನ್ನು ಹಿಂಪಡೆಯಲು ಪ್ರಕ್ರಿಯೆಯನ್ನು ಅನುಸರಿಸಿ.
6. ನಿಮ್ಮ ನವೀಕರಣ ವಿನಂತಿಯನ್ನು ತಿರಸ್ಕರಿಸಿದರೆ, ನೀವು 1947 ಗೆ ಕರೆ ಮಾಡಿ ಮತ್ತು ನಿರಾಕರಣೆಯ ಕಾರಣವನ್ನು ಪಡೆಯಬಹುದು ಮತ್ತು ನೀವು ಇನ್ನೊಂದು ನವೀಕರಣ ವಿನಂತಿಯನ್ನು ನೀಡುವ ಮೊದಲು ನಿರಾಕರಣೆಯ ಕಾರಣವನ್ನು ಸರಿಪಡಿಸುವ ಕ್ರಮವನ್ನು ತೆಗೆದುಕೊಳ್ಳಬಹುದು.

5. ನಿಮ್ಮ ಆಧಾರ್ 'ಅಮಾನ್ಯ' ಎಂದು ತೋರಿಸಿದರೆ, ಹೆಚ್ಚಿನ ಮಾರ್ಗದರ್ಶನ ಪಡೆಯಲು 1947 ಗೆ ಕರೆ ಮಾಡಿ.

6. ನಿಮ್ಮ ಆಧಾರ್ ಪತ್ರದಲ್ಲಿ 'ಹುಟ್ಟಿದ ವರ್ಷ' ಮಾತ್ರ ಮುದ್ರಿತವಾಗಿದ್ದರೆ, ನವೀಕರಿಸಬೇಡಿ. ನಿಮ್ಮ ಆಧಾರ್ ಸಂಪೂರ್ಣ ಜನ್ಮ ದಿನಾಂಕವನ್ನು ತೋರಿಸುತ್ತದೆ ಎಂದು ಖಾತ್ರಿ ಮಾಡಿಕೊಳ್ಳಲು ನಿಮ್ಮ ಇತ್ತೀಚಿನ ಆಧಾರ್ ಅಥವಾ ಆರ್ಡರ್ ಆಧಾರ್ ಮರುಮುದ್ರಣವನ್ನು uidai.gov.in ನಿಂದ ಡೌನ್‌ಲೋಡ್ ಮಾಡಿ.

### 3.10 ಆಧಾರ್ ನವೀಕರಣಕ್ಕಾಗಿ ನೆನಪಿಡಬೇಕಾದ ಅಂಶಗಳು

ಆಧಾರ್ ಸಂಖ್ಯೆ ಹೊಂದಿರುವ ನಿವಾಸಿಯೊಬ್ಬರು, ಹದಿನೆಂಟು ವರ್ಷ ದಾಟಿದ ನಂತರ, ಹದಿನೆಂಟು ವರ್ಷ ದಾಟಿದ ದಿನಾಂಕದಿಂದ ಆರು ತಿಂಗಳ ಅವಧಿಯಲ್ಲಿ ಯುಐಡಿಎಐನ ಪ್ರಾದೇಶಿಕ ಕಚೇರಿಗೆ ಅವನ / ಅವಳ ಆಧಾರ್ ಸಂಖ್ಯೆಯನ್ನು ರದ್ದುಗೊಳಿಸುವಂತೆ ಅರ್ಜಿ ಸಲ್ಲಿಸಬಹುದು.

ಆಧಾರ್ ದೃಢೀಕರಣ ಅಥವಾ ಇನ್ನಾವುದೇ ವಿಧಾನಗಳ ಮೂಲಕ ನಿವಾಸಿ ತನ್ನ / ಅವಳ ಗುರುತನ್ನು ಸ್ಥಾಪಿಸಲು ನಿಗದಿತ ದಿನಾಂಕ ಮತ್ತು ಸಮಯದಲ್ಲಿ ಪ್ರಾದೇಶಿಕ ಕಚೇರಿಗೆ ಭೇಟಿ ನೀಡಬೇಕಾಗುತ್ತದೆ, ಇದರಿಂದಾಗಿ ಪ್ರಾದೇಶಿಕ ಕಚೇರಿ ಆಧಾರ್ ಸಂಖ್ಯೆಯನ್ನು ರದ್ದುಗೊಳಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದು, ಅದನ್ನು ರದ್ದುಗೊಳಿಸಲಾಗುತ್ತದೆ ಮೂರು ತಿಂಗಳ ಅವಧಿಯಲ್ಲಿ.

## 4 ಆಧಾರ್ ನೋಂದಣಿ / ಅಪ್‌ಡೇಟ್ ಗೆ ಮಾನ್ಯ ದಾಖಲೆ ಪಟ್ಟಿ

ಪರಿಶೀಲನೆಗಾಗಿ ಮಾನ್ಯ ಪೋಷಕ ದಾಖಲೆಯನ್ನು ಒದಗಿಸುವ ಮೂಲಕ ನೀವು ಆಧಾರ್‌ಗೆ ದಾಖಲಾಗಬಹುದು ಅಥವಾ ಸಾಮಾಜಿಕ ವಿವರಗಳನ್ನು ನಿಮ್ಮ ಆಧಾರ್‌ನಲ್ಲಿ ನವೀಕರಿಸಬಹುದು. ಗುರುತಿನ ಪುರಾವೆ (ಪಿಒಐ) / ವಿಳಾಸದ ಪುರಾವೆ (ಪಿಒಎ) / ಹುಟ್ಟಿದ ದಿನಾಂಕದ ಪುರಾವೆ (ಡಿಒಬಿ) / ಸಂಬಂಧದ ಪುರಾವೆ (ಪಿಒಆರ್) ಈ ಪಟ್ಟಿಯು ನಮ್ಮ ವೆಬ್‌ಸೈಟ್ uidai.gov.in, mAadhaar ಅಪ್ಲಿಕೇಶನ್‌ನಲ್ಲಿ ಲಭ್ಯವಿದೆ ಮತ್ತು ಅನೆಕ್ಸ್ 1 ವಿಭಾಗ 13.1 ರಲ್ಲು ಸಹಾ ಒದಗಿಸಲಾಗಿದೆ .

ಇವುಗಳಿಗಾಗಿ ಮಾನ್ಯ ಪೋಷಕ ದಾಖಲೆಗಳು ಕಡ್ಡಾಯವಾಗಿದೆ:

- ಆಧಾರ್ ದಾಖಲಾತಿ

- ಹೆಸರು  ಅಪ್‌ಡೇಟ್/ ನವೀಕರಣ
- ವಿಳಾಸ  ಅಪ್‌ಡೇಟ್/ ನವೀಕರಣ
- ಜನನ ದಿನಾಂಕದ ಅಪ್‌ಡೇಟ್/ ನವೀಕರಣ

ನಿಮ್ಮ ಆಧಾರ್‌ನಲ್ಲಿನ ಯಾವುದೇ ಸಾಮಾಜಿಕ  ಅಥವಾ ಬಯೋಮೆಟ್ರಿಕ್ ವಿವರಗಳ ನವೀಕರಣಕ್ಕಾಗಿ ನಿಮ್ಮ ಆಧಾರ್‌ನೊಂದಿಗೆ ನೀವು ನೇರವಾಗಿ ಆಧಾರ್ ಕೇಂದ್ರಕ್ಕೆ ಭೇಟಿ ನೀಡಬಹುದು. ಎನ್‌ಆರ್‌ಐ ನೋಂದಣಿ ಮಾಡಿಸಲು   ಭಾರತೀಯ ಪಾಸ್‌ಪೋರ್ಟ್ ಕಡ್ಡಾಯ ಪಿಓಐ ಆಗಿದೆ ಎಂಬುದನ್ನು ಗಮನಿಸಿ. ಎನ್‌ಆರ್ ಐ  ಬೇರೆ ಯಾವುದೇ ದಾಖಲೆಯನ್ನು  (ಮಾನ್ಯ ದಾಖಲೆಗಳ ಪಟ್ಟಿಯ ಪ್ರಕಾರ) ಪಿಓಎ ಆಗಿ ನೀಡಲು ಆಯ್ಕೆ ಮಾಡಬಹುದು.
ಸ್ವೀಕಾರಾರ್ಹ ದಾಖಲೆಗಳ ಪಟ್ಟಿಯನ್ನು ಉಲ್ಲೇಖಿಸಲು ಸ್ಕ್ಯಾನ್ ಮಾಡಿ -

https://uidai.gov.in/images/commdoc/valid_documents_list.pdf

### 4.1  ಗುರುತಿನ ಪುರಾವೆ ( ಪಿ ಓ ಐ )

ಆಧಾರ್ ನೋಂದಣಿ  ಅಥವಾ ಹೆಸರು ನವೀಕರಣಕ್ಕಾಗಿ, ಮಾನ್ಯ ದಾಖಲೆಗಳ ಪಟ್ಟಿಯ ಪ್ರಕಾರ ನೀವು ಕನಿಷ್ಠ ಒಂದು ಪಿಓಐ ದಾಖಲೆಯನ್ನ  ಭಾವಚಿತ್ರದೊಂದಿಗೆ ಒದಗಿಸಬೇಕಾಗುತ್ತದೆ.

### 4.2 ವಿಳಾಸದ ಪುರಾವೆ   ( ಪಿ ಓ ಎ )

ವಿಳಾಸ ನವೀಕರಣಕ್ಕಾಗಿ ಆಧಾರ್ **ಸೇವಾ** ಕೇಂದ್ರದಲ್ಲಿ ಅಥವಾ ಆನ್‌ಲೈನ್‌ನಲ್ಲಿ ಎಸ್‌ಎಸ್‌ಯುಪಿ ಮೂಲಕ, ನಿಮ್ಮ ಹೆಸರಿನಲ್ಲಿ ನೀವು ಪಿಓಎ ದಾಖಲೆಯನ್ನು  ಒದಗಿಸಬೇಕುನೀವು ವಿಳಾಸ ಕ್ರಮಬದ್ಧಗೊಳಿಸುವಿಕೆ ಪತ್ರ . ಸೇವೆಯನ್ನು ಸಹ ಬಳಸಬಹುದು  )ಸೆಕ್ಷನ್ 3.2.2 . ರಲ್ಲಿ ಉಲ್ಲೇಖಿತ.

### 4.3 ಹುಟ್ಟಿದ ದಿನಾಂಕದ ಪುರಾವೆ (ಡಿ ಓ ಬಿ)

ನಿಮ್ಮ ಆಧಾರ್‌ನಲ್ಲಿ ಹುಟ್ಟಿದ ದಿನಾಂಕವನ್ನು ನವೀಕರಿಸಲು, ಯುಐಡಿಎಐ ಅಂಗೀಕರಿಸಿದ ಮಾನ್ಯ ದಾಖಲೆಗಳ ಪಟ್ಟಿಯ ಪ್ರಕಾರ ನಿಮ್ಮ ಹೆಸರಿನಲ್ಲಿ ನೀವು ಡಿಓಬಿ ದಾಖಲೆಯನ್ನು  ಒದಗಿಸಬೇಕು.

### 4.4 ಸಂಬಂಧದ ಪುರಾವೆ (ಪಿ ಓ ಆರ್)

‘ಕುಟುಂಬದ ಮುಖ್ಯಸ್ಥ’ ಆಧಾರಿತ ದಾಖಲಾತಿ ಅಥವಾ ‘ಮಕ್ಕಳ ದಾಖಲಾತಿ’ ಗಾಗಿ, ಯುಐಡಿಎಐ ಅಂಗೀಕರಿಸಿದ ಮಾನ್ಯ ಪಿಒಆರ್ ದಾಖಲೆಗಳ ಪಟ್ಟಿಯ ಪ್ರಕಾರ ನೀವು ಸಂಬಂಧದ ಪುರಾವೆ ಪಿಒಆರ್) ದಾಖಲೆಯನ್ನು ಒದಗಿಸಬೇಕು)

### 4.5 ಆಧಾರ್ ದಾಖಲಾತಿ ಅಪ್ ಡೇಟ್ / ನವೀಕರಣಕ್ಕೆ ಪ್ರಮಾಣ ಪತ್ರ

ಪೋಷಕ ದಾಖಲೆಗಳ ಪಟ್ಟಿಯ ಪ್ರಕಾರ, ನೀವು ಆಧಾರ್ ದಾಖಲಾತಿ / ನವೀಕರಣಕ್ಕಾಗಿ ಸಮರ್ಥ ಪ್ರಾಧಿಕಾರವು ನೀಡಿದ ಪ್ರಮಾಣಪತ್ರವನ್ನು ಪಿಒಐ / ಪಿಒಎ / ಡಿಒಬಿ ಪ್ರೂಫ್ / ಪಿಒಆರ್ ಆಗಿ ಬಳಸಬಹುದು. ಈ ಪ್ರಮಾಣಪತ್ರಕ್ಕಾಗಿ ಯುಐಡಿಎಐ ಪ್ರಮಾಣಿತ ಸ್ವರೂಪವನ್ನು ಸೂಚಿಸಿದೆ (ವಿಭಾಗ 13.2, ಅನೆಕ್ಸ್- II ನೋಡಿ). ಪಿ ಓ ಐ / ಪಿ ಓ ಎ / ಡಿ ಓ ಬಿ ಗಾಗಿ ಸ್ವೀಕರಿಸಿದ ದಾಖಲೆಗಳ ಪಟ್ಟಿಯಲ್ಲಿ ನೀವು ಬೇರೆ ಯಾವುದೇ ದಾಖಲೆಗಳನ್ನು ಹೊಂದಿಲ್ಲದಿದ್ದರೆ ಮಾತ್ರ ನೀವು ಅಂತಹ ಪ್ರಮಾಣಪತ್ರವನ್ನು ಬಳಸಬೇಕು.

ಆಧಾರ್ ದಾಖಲಾತಿ / ನವೀಕರಣಕ್ಕಾಗಿ ಪ್ರಮಾಣಪತ್ರಕ್ಕಾಗಿ ಪ್ರಮಾಣಿತ ಸ್ವರೂಪವನ್ನು ನೋಡಲು ಸ್ಕ್ಯಾನ್ ಮಾಡಿ:

https://uidai.gov.in/images/commdoc/valid_documents_list.pdf

## 5 ಆಧಾರ್ ನೋಂದಣಿಗಾಗಿ / ಅಪ್ ಡೇಟ್ ಗಾಗಿ ಶುಲ್ಕಗಳು

ವಿವಿಧ ಆಧಾರ್ ಸಂಬಂಧಿತ ಸೇವೆಗಳಿಗಾಗಿ ನಿವಾಸಿಗಳಿಗೆ ಗರಿಷ್ಠ ಮೊತ್ತವನ್ನು ವಿಧಿಸಬೇಕೆಂದು ಎಲ್ಲಾ ರಿಜಿಸ್ಟ್ರಾರ್ ಗಳಿಗೆ ಯುಐಡಿಎಐ ನಿರ್ದೇಶಿಸಿದೆ . ಒಂದೇ ನಿದರ್ಶನದಲ್ಲಿ ಒಂದಕ್ಕಿಂತ ಹೆಚ್ಚು ಮಾಹಿತಿಗಳ ನವೀಕರಣವನ್ನು ಒಂದೇ ನವೀಕರಣವೆಂದು ಪರಿಗಣಿಸಲಾಗುತ್ತದೆ. ಸಮಯ ಮತ್ತು ಹಣವನ್ನು ಉಳಿಸಲು , ಯಾವುದೇ ಆಧಾರ್ ಕೇಂದ್ರಕ್ಕೆ ನಿಮ್ಮ ಭೇಟಿಯ ಸಮಯದಲ್ಲಿ , ಆಧಾರ್ ವಿವರಗಳನ್ನು ಪರಿಶೀಲಿಸಲು ಮತ್ತು ನವೀಕರಣದ ಅಗತ್ಯವಿರುವ ಎಲ್ಲಾ ಮಾಹಿತಿಗಳನ್ನು ನವೀಕರಿಸಲು ಶಿಫಾರಸು ಮಾಡಲಾಗಿದೆ.

ಶುಲ್ಕ ಇನ್ಫೋಗ್ರಾಫಿಕ್

### 5.1 ಆಧಾರ್ ನೋಂದಣಿ / ಅಪ್ ಡೇಟ್ ಅರ್ಜಿಗೆ ಯಾವುದೇ ಶುಲ್ಕ ಇಲ್ಲ

ರಿಜಿಸ್ಟ್ರಾರ್ ನಡೆಸುವ ಯಾವುದೇ ಆಧಾರ್ ಕೇಂದ್ರ ಅಂದರೆ ಬ್ಯಾಂಕುಗಳು, ಅಂಚೆ ಕಚೇರಿಗಳು, ಬಿಎಸ್ಎನ್ಎಲ್ ಕೇಂದ್ರಗಳು, ಸಿಎಸ್‌ಸಿಗಳು ಅಥವಾ ರಾಜ್ಯ ಸರ್ಕಾರಿ ಕಚೇರಿಗಳು ಅಥವಾ ಸಾಮಾನ್ಯ ಸೇವಾ ಕೇಂದ್ರಗಳ ಕಚೇರಿಗಳು ಅಥವಾ ಯುಐಡಿಎಐ ನಡೆಸುವ ಆಧಾರ್ ಸೇವಾ ಕೇಂದ್ರಗಳಿಗೆ ಭೇಟಿ ನೀಡಿದಾಗ, ಆಧಾರ್ ನೋಂದಣಿ ಅಪ್ ಡೇಟ್ ಅರ್ಜಿಗಳಿಗೆ ಪಾವತಿಸಲು ಯಾವುದೇ ಶುಲ್ಕಗಳಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ. **ಶುಲ್ಕಗಳು ಮೇಲೆ ತಿಳಿಸಿದಂತೆ ಆಧಾರ್ ನವೀಕರಣ ಅಥವಾ ಮುದ್ರಣಕ್ಕಾಗಿ ಮಾತ್ರ.**

ನಿಮ್ಮ ಭೇಟಿ ಸಮಯವನ್ನು ನೀವು ಆನ್‌ಲೈನ್‌ನಲ್ಲಿ ಕಾಯ್ದಿರಿಸಿದರೆ, ಅನ್ವಯವಾಗುವ ಶುಲ್ಕಗಳನ್ನು ಆನ್‌ಲೈನ್‌ನಲ್ಲಿ ಪಾವತಿಸಲು ನೀವು ಆಯ್ಕೆ ಮಾಡಬಹುದು.

ಬಾಕ್ಸ್ ಸಂದೇಶ: ನಿಮ್ಮ ಆಧಾರ್ ನೋಂದಣಿ / ನವೀಕರಣ ಫಾರ್ಮ್ ಅನ್ನು uidai.gov.in ನಿಂದ ಡೌನ್‌ಲೋಡ್ ಮಾಡಿ. ಅರ್ಜಿ / ಫಾರ್ಮ್ ಗೆ **ಯಾವುದೇ ದಲ್ಲಾಳಿ / ಏಜೆನ್ಸಿಗೆ ಯಾವುದೇ ಶುಲ್ಕವನ್ನು ಪಾವತಿಸಬೇಡಿ**.

ನಿವಾಸಿಗಳು ಕೆಳಗಿನ ಲಿಂಕ್‌ನಿಂದ ಆಧಾರ್ ದಾಖಲಾತಿ / ನವೀಕರಣವನ್ನು ಡೌನ್‌ಲೋಡ್ ಮಾಡಿ ಮುದ್ರಿಸಬಹುದು

https://www.uidai.gov.in/images/commdoc/valid_documents_list.pdf.

ತಪ್ಪುಗಳನ್ನು ತಪ್ಪಿಸಲು ನಿವಾಸಿ ಯಾವುದೇ ಕೇಂದ್ರಕ್ಕೆ ಭರ್ತಿ ಮಾಡಿದ ಫಾರ್ಮ್ ಅನ್ನು ತರಬಹುದು

### 5.2 ಸೇವಾ ಕೇಂದ್ರವು ಹೆಚ್ಚಿನ ಶುಲ್ಕ ಪಡೆದರೆ ದೂರು ಸಲ್ಲಿಕೆ ಹೇಗೆ ?

ಮೇಲೆ ತಿಳಿಸಿದ ಸೇವಾ ಶುಲ್ಕಕ್ಕಿಂತ ಕೇಂದ್ರವು ನಿಮಗೆ ಹೆಚ್ಚಿನ ಶುಲ್ಕ ವಿಧಿಸಿದರೆ, ನೀವು ಈ ಕೆಳಗಿನ ವಿಧಾನಗಳಲ್ಲಿ ದೂರು ಸಲ್ಲಿಸಬಹುದು:

- 1947 ಗೆ ಕರೆ ಮಾಡಿ ಮತ್ತು ದೂರನ್ನು ನೋಂದಾಯಿಸಿ.
- ನಿಮ್ಮ ಯುಆರ್ಎನ್ ಜೊತೆಗೆ ಕೇಂದ್ರ ವಿವರಗಳನ್ನು ಮತ್ತು ಸಂಪರ್ಕ ವಿವರಗಳನ್ನು help@uidai.gov.in ಗೆ ಇಮೇಲ್ ಮಾಡಿ
- ಆನ್‌ಲೈನ್‌ನಲ್ಲಿ ದೂರನ್ನು ದಾಖಲಿಸಿ: https://resident.uidai.gov.in/file-complaint
- ನಿವಾಸಿ ಸಂಬಂಧಪಟ್ಟ ರಿಜಿಸ್ಟ್ರಾರ್‌ಗೆ ದೂರು ನೀಡಬಹುದು, ರಿಜಿಸ್ಟ್ರಾರ್ ವಿವರಗಳು ನಿಮ್ಮ ಕೇಂದ್ರದಲ್ಲಿ ಲಭ್ಯವಿದೆ

## 6 ಆಧಾರ್ ಪಡೆಯುವುದು

### 6.1 ಆಧಾರ್ ರಚನೆ

ಮೇಲೆ ವಿವರಿಸಿದಂತೆ ಯುಐಡಿಎಐ ನಿಗದಿಪಡಿಸಿದ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ನೀವು ಆಧಾರ್‌ಗೆ ದಾಖಲಾದ ನಂತರ, ನಿಮ್ಮ ಡೇಟಾವು ಹಲವಾರು ಗುಣಮಟ್ಟದ ಪರಿಶೀಲನೆಗಳಿಗೆ ಒಳಪಟ್ಟಿರುತ್ತದೆ. ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ, ನಿಮ್ಮ ಆಧಾರ್ ಅನ್ನು ರಚಿಸಲಾಗುತ್ತದೆ. ಪ್ರತಿ ನಂತರದ ಆಧಾರ್ ನವೀಕರಣದ ವಿನಂತಿಯಲ್ಲೂ ಇದೇ ರೀತಿಯ ಗುಣಮಟ್ಟದ ಪರಿಶೀಲನಾ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತದೆ. ನಿಮ್ಮ ಆಧಾರ್ ರಚಿಸಿದಾಗ / ನವೀಕರಿಸಿದಾಗ ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಯಲ್ಲಿ ನೀವು ಎಸ್ ಎಂ ಎಸ್ ಸ್ವೀಕರಿಸುತ್ತೀರಿ.

### 6.2 ಆಧಾರ್ ಪತ್ರ

ಆಧಾರ್ ರಚನೆಯಾದ ನಂತರ ಅಥವಾ ನೀವು ಸಲ್ಲಿಸಿದ ನವೀಕರಣ ವಿನಂತಿಯನ್ನು ಪೂರ್ಣಗೊಳಿಸಿದ ನಂತರ, ನಿಮ್ಮ ಆಧಾರ್ ಪತ್ರವನ್ನು ಮುದ್ರಿಸಿ ಇಂಡಿಯಾ ಪೋಸ್ಟ್ ನ ನಿಯಮಿತ ಅಂಚೆ ಸೇವೆಯ ಮೂಲಕ ನಿಮ್ಮ ನೋಂದಾಯಿತ ವಿಳಾಸಕ್ಕೆ ಕಳುಹಿಸಲಾಗುತ್ತದೆ. ನಿಮ್ಮ ಆಧಾರ್ ಪತ್ರವನ್ನು ರವಾನಿಸಿದಾಗ ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಯಲ್ಲಿ ನೀವು ಎಸ್ ಎಂ ಎಸ್ ಸ್ವೀಕರಿಸುತ್ತೀರಿ.

ನಿಮ್ಮ ಆಧಾರ್ ಪತ್ರದ ರವಾನೆ ದಿನಾಂಕವನ್ನು ಪಡೆಯಲು ನೀವು 1947 ಗೆ ಕರೆ ಮಾಡಬಹುದು ಮತ್ತು ಆಧಾರ್ ಪತ್ರವನ್ನು ತಲುಪಿಸಲು ನಿಮ್ಮ ಸ್ಥಳೀಯ ಅಂಚೆ ಕಚೇರಿಯೊಂದಿಗೆ ಸಂಯೋಜಿಸಬಹುದು.

ರವಾನೆಯ ದಿನಾಂಕದ 15 ದಿನಗಳಲ್ಲಿ ನೀವು ಆಧಾರ್ ಪತ್ರವನ್ನು ಸ್ವೀಕರಿಸದಿದ್ದರೆ, ವಿತರಣೆಯ ವಿಳಂಬದ ಕಾರಣವನ್ನು ಪರಿಶೀಲಿಸಲು ನಿಮ್ಮ ಸ್ಥಳೀಯ ಅಂಚೆ ಕಚೇರಿಯನ್ನು ಸಂಪರ್ಕಿಸಬಹುದು.

## 6.3 ಆಧಾರ್ ನ ಡೌನ್ ಲೋಡ್ ಮಾಡುವುದು

ನಿಮ್ಮ ಆಧಾರ್ ಅನ್ನು ಯುಐಡಿಎಐ ವೆಬ್‌ಸೈಟ್ - https://eaadhaar.uidai.gov.in/#/ ಅಥವಾ mAadhaar ಅಪ್ಲಿಕೇಶನ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ನಿಮ್ಮ ಆಧಾರ್ ಅನ್ನು ಈ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು:

ಐ ಡಿ ಇಐಡಿ (ನೋಂದಣಿ ಐಡಿ) ಬಳಸುವುದು: ನಿಮ್ಮ ಆಧಾರ್ ಡೌನ್‌ಲೋಡ್ ಮಾಡಲು ನಿಮ್ಮ 28 ಅಂಕಿಗಳ ದಾಖಲಾತಿ ಸಂಖ್ಯೆಯನ್ನು ಪೂರ್ಣ ಹೆಸರು ಮತ್ತು ಪಿನ್ ಕೋಡ್‌ನೊಂದಿಗೆ (ದಾಖಲಾತಿಯ ಸಮಯದಲ್ಲಿ ನೀಡಿದಂತೆ) ಬಳಸಿ.

ಐ ಡಿ ಯುಐಡಿ (ಆಧಾರ್ ಸಂಖ್ಯೆ)ಬಳಸುವುದು : ನಿಮ್ಮ ಆಧಾರ್ ಡೌನ್‌ಲೋಡ್ ಮಾಡಲು ನಿಮ್ಮ 12 ಅಂಕೆ ಆಧಾರ್ ಸಂಖ್ಯೆಯನ್ನು ಪೂರ್ಣ ಹೆಸರು ಮತ್ತು ಪಿನ್ ಕೋಡ್ ನೊಂದಿಗೆ ಬಳಸಿ.

### 6.3.1 ಆಧಾರ್ ಮತ್ತು ಪಾಸ್ ವರ್ಡ್ ಡೌನ್ ಲೋಡ್ ಮಾಡಲು ಓ ಟಿ ಪಿ

ಆಧಾರ್ ಡೌನ್‌ಲೋಡ್ ಮಾಡಲು ನಿಮ್ಮ ಆಧಾರ್ ನೋಂದಾಯಿತ ಮೊಬೈಲ್ ಸಂಖ್ಯೆಗೆ ಒಟಿಪಿ ಬರುತ್ತದೆ . ಈ ಒಟಿಪಿಗೆ ಬದಲಾಗಿ, ನೀವು ಇ-ಆಧಾರ್ ಡೌನ್‌ಲೋಡ್ ಮಾಡಲು ಟಿ-ಒಟಿಪಿ (ಅಥವಾ ಸಮಯ ಆಧಾರಿತ ಒಟಿಪಿ) ಅನ್ನು ಸಹ ಬಳಸಬಹುದು. ಎಂ-ಆಧಾರ್ ಅಪ್ಲಿಕೇಶನ್ ಬಳಸಿ ಟಿ-ಒಟಿಪಿ ಪಡೆಯಬಹುದು .

<ಎಂ ಆಧಾರ್ ಅಪ್ಲಿಕೇಶನ್‌ನಿಂದ ಟಿ-ಒಟಿಪಿ ಸೇವೆಯ ಸ್ಕ್ರೀನ್‌ಶಾಟ್ ಸೇರಿಸಿ>

ಡೌನ್‌ಲೋಡ್ ಮಾಡಲಾದ ಆಧಾರ್ ಅನ್ನು ಇ ಆಧಾರ್ ಎಂದೂ ಕರೆಯಲಾಗುತ್ತದೆ, ಇದು ನಿಮ್ಮ ಆಧಾರ್‌ನ ಪಾಸ್‌ವರ್ಡ್ ರಕ್ಷಿತ ಎಲೆಕ್ಟ್ರಾನಿಕ್ ಪ್ರತಿ ಆಗಿದೆ. ಇದನ್ನು .ಪಿಡಿಎಫ್ ಡಾಕ್ಯುಮೆಂಟ್ ಆಗಿ ಡೌನ್‌ಲೋಡ್ ಮಾಡಲಾಗಿದೆ. ನಿಮ್ಮ eAadhaar .pdf ಫೈಲ್‌ನ ಪಾಸ್‌ವರ್ಡ್ ನಿಮ್ಮ ಹೆಸರಿನ ಮೊದಲ 4 ಕ್ಯಾಪಿಟಲ್ ಅಕ್ಷರಗಳು ಮತ್ತು ಹುಟ್ಟಿದ ವರ್ಷ (YYYY) ಆಗಿದೆ.

ಇ ಆಧಾರ್ ಕುರಿತು ಇನ್ನಷ್ಟು ಓದಲು ಸ್ಕ್ಯಾನ್ ಮಾಡಿ: https://uidai.gov.in/contact-support/have-any-question/283-faqs/aadhaar-online-services/e-aadhaar.html

### 6.3.2 ಇ ಆಧಾರ್ ನಲ್ಲಿ ಡಿಜಿಟಲ್ ಸಹಿಯನ್ನು ಮೌಲ್ಯೀಕರಿಸುವುದು

